ವಿಜಯಪುರ | ಸಂಪುಟ 01 | ಸಂಚಿಕೆ 290 | ಪುಟ 4 | ₹ 3.00

https://udayarashminews.com

udayarashmi 7026028778

# ಉದಯ ರಶ್ಮಿ

ಜನಪರ-ಜೀವಪರ

**ಸಂಪಾದಕ : ಇಂದುಶೇಖರ ಮಣೂರ**

ಕನ್ನಡ ದಿನಪತ್ರಿಕೆ

editor.udayarashmi@gmail.com Title Code: KARKAN28047 ಶನಿವಾರ, ಜನವರಿ 13, 2024

“ವಿಜಯಪುರ ಮಹಾನಗರ ಪಾಲಿಕೆ ಒಡೆತನದಲ್ಲಿರುವ ಆಸ್ತಿಗಳನ್ನು ನಕಲಿ ಸಂಸ್ಥೆಗಳಿಗೆ ಲೀಜ್ ನೆಪದಲ್ಲಿ ಮಾರಾಟ ಮಾಡಲು ಮುಂದಾದರೆ, ತಪ್ಪಿತಸ್ಥ ಅಧಿಕಾರಿಗಳು, ಸಿಬ್ಬಂದಿ ವಿರುದ್ಧ ಹೋರಾಟ ಮಾಡುವುದಲ್ಲದೆ, ಕ್ರಿಮಿನಲ್ ಕೇಸ್ ದಾಖಲಿಸುವೆ.”

– ಬಸನಗೌಡ ಪಾಟೀಲ, ಯತ್ನಾಳ ಶಾಸಕರು, ವಿಜಯಪುರ ನಗರಕ



### ಪ್ರಣಾಳಿಕೆಯಲ್ಲಿ ಘೋಷಿಸಿದಂತೆ ಐದೂ ಗ್ಯಾರಂಟಿ ಯೋಜನೆಗಳು ಜಾರಿಗೆ :ಸಿಎಂ ಸಿದ್ದರಾಮಯ್ಯ

# ‘ಯುವನಿಧಿ’ ಗ್ಯಾರಂಟಿ ಯೋಜನೆಗೆ ಸಿಎಂ ಚಾಲನೆ

ಬೆಂಗಳೂರು: ಚುನಾವಣಾ ಪೂರ್ವ ನೀಡಿದ್ದ ಗ್ಯಾರಂಟಿಗಳ ಪೈಕಿ ಐದನೇ ಗ್ಯಾರಂಟಿ ‘ಯುವನಿಧಿ ಯೋಜನೆ’ಗೆ ಶುಕ್ರವಾರ (ಜ.12) ಮುಖ್ಯಮಂತ್ರಿ ಸಿದ್ದರಾಮಯ್ಯ ಚಾಲನೆ ನೀಡಿದ್ದಾರೆ.

ಶಿವಮೊಗ್ಗ ನಗರ ಫ್ರೀಡಂ ಪಾರ್ಕ್‌ನಲ್ಲಿ ರಾಜ್ಯದ ವಿವಿದಡೆಗಳಿಂದ ಆಗಮಿಸಿದ್ದ 15 ಮಂದಿ ಯುವ ಜನರಿಗೆ ಸಾಂಕೇತಿಕವಾಗಿ ನಿರುದ್ಯೋಗ ಭತ್ಯೆಯ ಚೆಕ್ ನೀಡುವ ಮೂಲಕ ಸಿಎಂ ಯೋಜನೆಯನ್ನು ಉದ್ಘಾಟಿಸಿದರು.

ಈ ವೇಳೆ ಉಪ ಮುಖ್ಯಮಂತ್ರಿ ಡಿ.ಕೆ ಶಿವಕುಮಾರ್, ಸಚಿವರಾದ ಡಾ.ಶರಣ ಪ್ರಕಾಶ್ ಪಾಟೀಲ್, ಮಧು ಬಂಗಾರಪ್ಪ, ಬಿ.ನಾಗೇಂದ್ರ, ಮಂಕಾಳ್ ವೈದ್ಯ ಸೇರಿದಂತೆ ಪ್ರಮುಖರು ಹಾಜ–



ರಿದ್ದರು.

ಕಾರ್ಯಕ್ರಮದ ಕುರಿತು ಎಕ್ಸ್‌ನಲ್ಲಿ ಬರೆದುಕೊಂಡಿರುವ ಸಿಎಂ ಸಿದ್ದರಾಮಯ್ಯ, “ಯಾವ ಧರ್ಮದಲ್ಲಿ ಹಸಿದವರಿಗೆ ಅನ್ನ ಕೊಡುವುದಿಲ್ಲವೋ ಅಂಥ ಧರ್ಮದಲ್ಲಿ ನನಗೆ ನಂಬಿಕೆ ಇಲ್ಲ ಎಂದು ವಿವೇಕಾನಂದರು ಘೋಷಿಸಿದ್ದರು. ಅವರ ಜನ್ಮ ದಿನದಂದೇ ನನ್ನ ಯುವಕ ಯುವತಿಯರು ಭ್ರಮನಿರಸನರಾಗದಂತೆ ಅವರ ಭವಿಷ್ಯಕ್ಕೆ ಶಕ್ತಿ ತುಂಬುವ ಸಲುವಾಗಿ ಯುವನಿಧಿ ಜಾರಿ ಮಾಡುತ್ತಿದ್ದೇವೆ ಎಂದಿದ್ದಾರೆ.

“ನಾನು ಮತ್ತು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹಾಗೂ ಸುರ್ಜೇವಾಲ ಅವರು ಚುನಾವಣಾ ಪೂರ್ಣ ಪ್ರಣಾಳಿಕೆಯಲ್ಲಿ ಘೋಷಿಸಿದಂತೆ ಐದೂ ಗ್ಯಾರಂಟಿ ಯೋಜನೆಗಳನ್ನು ಜಾರಿಗೆ ತಂದಿದ್ದೇವೆ. ನಿರುದ್ಯೋಗ ಸಮಸ್ಯೆ, ರೈತರ ಸಮಸ್ಯೆ ಹೆಚ್ಚಾಗಿ, ಆಹಾರ ಪದಾರ್ಥಗಳ ಬೆಲೆ ಗಗನಕ್ಕೆ ಏರಿರುವ ಸಂದರ್ಭದಲ್ಲಿ ಸಮಾಜದ ಎಲ್ಲಾ ವರ್ಗಗಳ ಸಮಸ್ಯೆಗೆ ಪರಿಹಾರವಾಗಿ ನಾವು ಗ್ಯಾರಂಟಿ ಯೋಜನೆಗಳನ್ನು ರೂಪಿಸಿದೆವು.




ಪ್ರಣಾಳಿಕೆಯಲ್ಲಿ ಘೋಷಿಸಿದೆವು. ಘೋಷಿಸಿದಂತೆ ಜಾರಿ ಮಾಡಿದ್ದೇವೆ ಎಂದು ಹೇಳಿದ್ದಾರೆ.

ಕಾಂಗ್ರೆಸ್ ಚುನಾವಣಾ ಪೂರ್ವದಲ್ಲಿ ಗೃಹಲಕ್ಷ್ಮಿ, ಗೃಹಜ್ಯೋತಿ, ಶಕ್ತಿ, ಅನ್ನಭಾಗ್ಯ ಮತ್ತು ಯುವನಿಧಿ ಯೋಜನೆಯ ಐದು ಗ್ಯಾರಂಟಿಗಳನ್ನು ನೀಡಿತ್ತು. ಯುವನಿಧಿ ಮೂಲಕ ಐದೂ ಗ್ಯಾರಂಟಿಗಳು ಜಾರಿಯಾದಂತಾಗಿದೆ.

# ವಿವಿಧ ಸ್ಥಳಗಳಿಗೆ ಜಿಲ್ಲಾಧಿಕಾರಿ ಟಿ.ಭೂಬಾಲನ್ ಭೇಟಿ–ಪರಿಶೀಲನೆ

**ಉದಯರಶ್ಮಿ ನ್ಯೂಸ್**

ವಿಜಯಪುರ: ಜಿಲ್ಲಾಧಿಕಾರಿ ಟಿ.ಭೂಬಾಲನ್ ಅವರು ನಗರದ ವಿವಿಧ ಪ್ರದೇಶಗಳಲ್ಲಿ ನಡೆಯುತ್ತಿರುವ ಕಾಮಗಾರಿ ಪ್ರದೇಶಗಳಿಗೆ ಶುಕ್ರವಾರ ಭೇಟಿ ನೀಡಿ, ಪರಿಶೀಲನೆ ನಡೆಸಿದರು.

ಪಾಲಿಕೆಯ ವ್ಯಾಪ್ತಿಯ ಇಂಡಿ ರಸ್ತೆಯಲ್ಲಿರುವ ಕಸ ವಿಲೇವಾರಿ ಸ್ಥಳಕ್ಕೆ ಭೇಟಿ ನೀಡಿ ಕಸ ಪ್ರತ್ಯೇಕಿಸುವ ಯಂತ್ರದ ಅಳವಡಿಕೆಯ ಕಾಮಗಾರಿ ಆದಷ್ಟು ಬೇಗನೆ ಯಂತ್ರದ ಅಳವಡಿಕೆ ಕೆಲಸ ಪೂರ್ಣಗೊಳಿಸಬೇಕು ಹಾಗೂ ಈ ಸ್ಥಳದಲ್ಲಿರುವ ಘನ ತ್ಯಾಜ್ಯ ಕೂಡಲೇ ವಿಲೇವಾರಿ ಮಾಡಲು ಕ್ರಿಯಾ ಯೋಜನೆ ಸಿದ್ಧಪಡಿಸಿ ಸಲ್ಲಿಸುವಂತೆಯೂ, ಮತ್ತು ಸುತ್ತಮುತ್ತಲಿನ ಗಿಡ ಮರಗಳಿಗೆ ಬೇಸಿಗೆ ಕಾಲದಲ್ಲಿ ಸರಿಯಾಗಿ ನೀರು ಒದಗಿಸಿ



ಪರಿಸರ ಕಾಳಜಿವಹಿಸಬೇಕು ಎಂದು ಪಾಲಿಕೆ ಪರಿಸರ ಅಭಿಯಂತರರಾದ ಅಶೋಕ ಸಜ್ಜನ ಅವರಿಗೆ ಸೂಚಿಸಿದರು.

ಹಂಚನಾಳ ತಾಂಡಾ ಹತ್ತಿರ ಇರುವ ಕೆರೆಗೆ ಭೇಟಿ ನೀಡಿ, ಜಿಲ್ಲಾ ಉಸ್ತುವಾರಿ ಸಚಿವರು ಸೂಚಿಸಿದಂತೆ, ಕೆರೆಯ ನೀರಿಗೆ ಕೆಮಿಕಲ್ ಟ್ರೀಟ್‌ಮೆಂಟ್ ಮಾಡಬೇಕು ಹಾಗೂ ಒಳಚರಂಡಿ ನೀರು ವೈಜ್ಞಾನಿಕವಾಗಿ ಸ್ವಚ್ಛಗೊಳಿಸುವ ಬಗ್ಗೆ ಕ್ರಮವಹಿಸಲು ಪಾಲಿಕೆ ಆಯುಕ್ತರಿಗೆ ಸೂಚಿಸಿದರು.

ಬರಟಗಿ ತಾಂಡಾ ಹತ್ತಿರ ಪೌರ ಕಾರ್ಮಿಕರ ಗೃಹಭಾಗ್ಯ ಯೋಜನೆ ಅಡಿಯಲ್ಲಿ ನಿರ್ಮಾಣ ಹಂತದ ಕಟ್ಟಡ ಕಾಮಗಾರಿ ಪರಿಶೀಲನೆ ನಡೆಸಿ, ಪೂರ್ಣಗೊಂಡ ಕಟ್ಟಡಗಳಲ್ಲಿ ಬಾಕಿ ಇರುವ ದುರಸ್ತಿ ಕಾರ್ಯ ಹಾಗೂ ಮೂಲಭೂತ ಸೌಲಭ್ಯಗಳನ್ನು ಆದ್ಯತೆಯ ಮೇಲೆ ನಿರ್ವಹಿಸಿ ಅವುಗಳನ್ನು ಒಂದು ವಾರದಲ್ಲಿ ಪೂರ್ಣಗೊಳಿಸಬೇಕು. ಕಲ್ಪಿಸಬೇಕು ಎಂದು ಪಾಲಿಕೆ ಆಯುಕ್ತರಿಗೆ ಸೂಚಿಸಿದರು.

ನಗರದ ಅಲ್ ಅಮಿನ್ ಕಾಲೇಜಿನ ಹತ್ತಿರ ಇರುವ ನಮೋ ನಗರದಲ್ಲಿ ನಿರ್ಮಾಣ ಆಗುತ್ತಿರುವ ಗುಂಪು ಮನೆ ಕಾಮಗಾರಿಯನ್ನು ಪರಿಶೀಲಿಸಿ, ಕಾಮಗಾರಿಯನ್ನು ತೀವ್ರಗತಿಯಲ್ಲಿ ಪೂರ್ಣಗೊಳಿಸಲು ಸಂಬಂಧಿಸಿದ ಗುತ್ತಿಗೆದಾರರಿಗೆ ಹಾಗೂ ಪಾಲಿಕೆಯ ಕಾರ್ಯ ನಿರ್ವಾಹಕ ಅಭಿಯಂತರರಿಗೆ ಸೂಚಿಸಿದರು. ಅಥಣಿ ಮಾರ್ಗದಲ್ಲಿ ನಿರ್ಮಾಣವಾಗುತ್ತಿರುವ ರಾಷ್ಟ್ರೀಯ ಹೆದ್ದಾರಿ ಕಾಮಗಾರಿ ಬೇಗ ಪೂರ್ಣಗೊಳಿಸಬೇಕು. ಜಿಲ್ಲಾ ಉಸ್ತುವಾರಿ ಸಚಿವರಾದ ಡಾ. ಎಂ.ಬಿ ಪಾಟೀಲ್ ಅವರು ಕೆಡಿಪಿ ಸಭೆಯಲ್ಲಿ ಪ್ರಸ್ತಾಪಿಸಿದ ಕುಲಕರ್ಣಿ ಬಡಾವಣೆಯಲ್ಲಿರುವ ಒಳಚರಂಡಿ ಪರಿಶೀಲಿಸಿದ ಅವರು, ಪಾಲಿಕೆಯ ವಿದ್ಯುತ್ ಅಭಿಯಂತರರಿಗೆ ನೀರೆತ್ತುವ ಮೋಟಾರ್‌ಗಳು ಹಾಳಾಗದಂತೆ ನೋಡಿಕೊಳ್ಳುವಂತೆ ಸೂಚಿಸಿದರು.

ಈ ಸಂದರ್ಭದಲ್ಲಿ ಮಹಾನಗರ ಪಾಲಿಕೆಯ ಆಯುಕ್ತರಾದ ಬದ್ರುದ್ದಿನ್ ಸೌದಾಗರ್, ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕರಾದ ವಿಜಯಕುಮಾರ ಮೆಕ್ಕಳಿಕಿ ಪಾಲಿಕೆಯ ಕಾರ್ಯ ನಿರ್ವಾಹಕ ಅಭಿಯಂತರರಾದ ಎಂ.ಸಿ. ಡೊಳ್ಳಿ, ಸಹಾಯಕ ಕಾರ್ಯ ನಿರ್ವಾಹಕ ಅಭಿಯಂತರರಾದ ವಿ.ಎನ್. ನ್ಯಾಮಗೊಂಡ, ಪಾಲಿಕೆಯ ಸಹಾಯಕ ಅಭಿಯಂತರರಾದ ಸುನೀಲ್ ಪಾಟೀಲ, ಸುನೀಲ ಹಿರೆಣ್ಣಿ, ಅನೀಲ್ ರಾಠೋಡ್ ಹಾಗೂ ರಾಷ್ಟ್ರೀಯ ಹೆದ್ದಾರಿ ಗುತ್ತಿಗೆದಾರರು ಉಪಸ್ಥಿತರಿದ್ದರು.

## ರಾಜ ನುಡಿ

ಇಂದು ನಾವು ಹೇಗಿದ್ದೇವೆ, ಏನಾಗಿದ್ದೇವೆ ಎಂಬುದು ನಾವು ಯುವಕರಾಗಿದ್ದಾಗ ಹೇಗಿದ್ದೆವು, ಏನು ಮಾಡಿದ್ದೆವು ಎಂಬುದನ್ನು ಆಧರಿಸಿದೆ. ತಾರುಣ್ಯವೆಂಬುದು ಭವಿಷ್ಯ ಬರುವ ಮುಂಚೆಯೇ ಭವಿಷ್ಯವನ್ನು ಬದಲಾಯಿಸಲು ಇರುವ ಜೀವಮಾನದ ಏಕ ಮಾತ್ರ ಅವಕಾಶ. ಈ ಕಾರಣ ವಿವೇಕಾನಂದರು ‘ಏಳಿ ಎದ್ದೇಳಿ’ಎಂದು ಕರೆ ಕೊಟ್ಟದ್ದು.

ರಾಷ್ಟ್ರೀಯ ಯುವ ದಿನದ ಶುಭಾಶಯಗಳು

–ಡಾ. ರಾಜಶೇಖರ ನಾಗೂರ

### ಪಾಲಿಕೆಯ ಆಸ್ತಿ ಲೀಜ್ ಅಥವಾ ಮಾರಾಟಕ್ಕೆ ಶಾಸಕರು & ಪಾಲಿಕೆ ಸರ್ವ ಸದಸ್ಯರ ಒಪ್ಪಿಗೆ ಅಗತ್ಯ | ಶಾಸಕ ಯತ್ನಾಳ ಅಭಿಮತ

# ಪಾಲಿಕೆ ಆಸ್ತಿಗಳು ಸರ್ಕಾರಿ ಯೋಜನೆಗಳಿಗೆ ಕಾಯ್ದಿರಿಸಿ

**ಉದಯರಶ್ಮಿ ನ್ಯೂಸ್**

ವಿಜಯಪುರ: ಮಹಾನಗರ ಪಾಲಿಕೆ ಒಡೆತನದಲ್ಲಿರುವ ಆಸ್ತಿಗಳನ್ನು ಸಾರ್ವಜನಿಕರ ಉದ್ದೇಶಕ್ಕಾಗಿ ಹಾಗೂ ಸರ್ಕಾರಿ ವಿವಿಧ ಯೋಜನೆಗಳಿಗಾಗಿ ಕಾಯ್ದಿರಿಸಬೇಕು ಎಂದು ನಗರ ಶಾಸಕ ಬಸನಗೌಡ ರಾ.ಪಾಟೀಲ ಯತ್ನಾಳ ಅವರು ತಿಳಿಸಿದ್ದಾರೆ.

ಈ ಕುರಿತು ಶುಕ್ರವಾರ ಪತ್ರಿಕಾ ಹೇಳಿಕೆ ನೀಡಿರುವ ಅವರು, ವಿಜಯಪುರ ಮಹಾನಗರ ಪಾಲಿಕೆ ಒಡೆತನದ ಕೊಟ್ಯಂತರ ಬೆಲೆ ಬಾಳುವ ನಗರ ಮಧ್ಯಭಾಗದಲ್ಲಿರುವ ಅಥವಾ ಹೊರ ಭಾಗದಲ್ಲಿರುವ ಪಾಲಿಕೆ ಆಸ್ತಿಗಳನ್ನು ಸಾರ್ವಜನಿಕರ ಉದ್ದೇಶಕ್ಕಾಗಿ ಹಾಗೂ ಸರ್ಕಾರದ ವಿವಿಧ ಯೋಜನೆಗಳಾದ ವಸತಿ, ಸಮುದಾಯ ಭವನಗಳು, ಒಳಾಂಗಣ ಕ್ರೀಡಾಂಗಣ, ಮಳಿಗೆಗಳು, ನಿರ್ಗತಿ–ಕರ ಭವನ, ಶಾಲಾ ಕಟ್ಟಡಗಳು, ಅಂಗನವಾಡಿ ಕೇಂದ್ರಗಳು ಮತ್ತಿತರೆ ಉದ್ದೇಶಕ್ಕಾಗಿ ಕಾಯ್ದಿ–ರಿಸಬೇಕಾದುದ್ದನ್ನು, ಕೆಲ ಅಧಿಕಾರಿಗಳು ಲೀಜ್ ನೆಪದಲ್ಲಿ ಖಾಸಗಿ ವ್ಯಕ್ತಿಗಳಿಗೆ ಅಥವಾ ಖಾಸಗಿ ಸಂಸ್ಥೆಗಳಿಗೆ ನೀಡುವ ಹುನ್ನಾರದ ಬಗ್ಗೆ ತಿಳಿದು ಬಂದಿದೆ.

ಒಂದು ವೇಳೆ ಖಾಸಗಿ ವ್ಯಕ್ತಿಗಳಿಗೆ ಅಥವಾ ನಕಲಿ ಸಂಸ್ಥೆಗಳಿಗೆ ಲೀಜ್ ನೆಪದಲ್ಲಿ ಮಾರಾಟ ಮಾಡಲು ಮುಂದಾದರೆ, ತಪ್ಪಿತಸ್ಥ ಅಧಿಕಾರಿಗಳು, ಸಿಬ್ಬಂದಿಗಳ ವಿರುದ್ಧ ಹೋರಾಟ ಮಾಡುವುದಲ್ಲದೆ, ಅವರ ಮೇಲೆ ಕ್ರಿಮಿನಲ್ ಕೇಸ್ ಗಳನ್ನು ದಾಖಲಿಸಿ ಸೇವೆಯಿಂದ ವಜಾ ಮಾಡುವವರೆಗೂ ಕಾನೂನು ಹೋರಾಟಕ್ಕೂ ಯಾವುದೇ ಮುಲಾಜಿಲ್ಲದೆ ನಾವು ಮುಂದಾಗಬೇಕಾಗುತ್ತದೆ.

ಕಾರಣ ಅಧಿಕಾರಿಗಳು ಅಥವಾ ಸಿಬ್ಬಂದಿಗಳು ಪಾಲಿಕೆಯ ಆಸ್ತಿಗಳನ್ನು ಲೀಜ್ ಆಧಾರದ ಮೇಲೆ ಮಾರಾಟ ಮಾಡಬೇಕಾದರೆ ಎಚ್ಚರಿಕೆಯಿಂದ ಇರಬೇಕು ಹಾಗೂ ಶಾಸಕರು ಒಳಗೊಂಡಂತೆ, ಪಾಲಿಕೆಯ ಸರ್ವ ಸದಸ್ಯರ ಗಮನಕ್ಕೆ ತರಬೇಕು ಎಂದು ತಿಳಿಸಿದ್ದಾರೆ.





## ವಚನ ಚಿಂತನ 277

**ಕಣ್ಣೊಳಗಿನ ಕಣ್ಣು–ನೇತ್ರ–ಸೂತ್ರ–ಲಿಂಗ–ಗುಹ್ಯ–ಗೋಪ್ಯ–ರಹಸ್ಯ**

*ಕಣ್ಣಿಂಗೆ ಕಣ್ಣು, ಕಣ್ಣೊಳು ಕಣ್ಣು,*
*ಕಣ್ಣೇ ನೇತ್ರ ನೇತ್ರವೆ ಸೂತ್ರ*
*ಸೂತ್ರವೆ ಲಿಂಗ, ಲಿಂಗವೆ ಗುಹ್ಯ.*
*ಗುಹ್ಯಕ್ಕೆ ಗುಹ್ಯ, ಗೋಪ್ಯಕ್ಕೆ ಗೋಪ್ಯ,*
*ರಹಸ್ಯಕ್ಕೆ ರಹಸ್ಯ. ಈ ನೇತ್ರಮಹಿಮೆಯ*
*ಗುಹೇಶ್ವರ ಬಲ್ಲನಲ್ಲದೆ ಕಣ್ಣುಗೆಟ್ಟಣ್ಣಗಳೆತ್ತ*
*ಬಲ್ಲರು ನೋಡಯ್ಯ.*

*– ಅಲ್ಲಮಪ್ರಭುಗಳು*

ಕಣ್ಣೊಳಗಿನ ಕಣ್ಣು–ನೇತ್ರ–ಸೂತ್ರ–ಲಿಂಗ–ಗುಹ್ಯ–ಗೋಪ್ಯ–ರಹಸ್ಯ ಇಲ್ಲಿ ಬಳಸಿರುವ ಪ್ರತಿ ಪದವು ಲಿಂಗಾಂಗದ ಅನುಸಂಧಾನದಲ್ಲಿ ಸಾಧಕನು ಅನುಭವಿಸುವ ಅನುಭಾವದ ನೆಲೆಯನ್ನು ಪ್ರತಿನಿಧಿಸುತ್ತವೆ. ಇಷ್ಟಲಿಂಗವನ್ನು ಅನಿಮಿಷ ದೃಷ್ಟಿಯಿಂದ ನೋಡುವಾಗ ಅಂಗದ ಭಾಹ್ಯಕಣ್ಣಿನ ಮೂಲಕ ಹೊರಡುವ ಕಿರಣಗಳು ಇಷ್ಟಲಿಂಗವನ್ನು ತಾಕಿ ಮರಳಿ ಪ್ರತಿಫಲಿಸಿ ಅಂಗದೊಳಗೆ ಕಣ್ಣಿನ ಮೂಲಕ ಪ್ರವೇಶಿಸಿದಾಗ ಅಂತರಂಗದ ನೇತ್ರ ಜಾಗೃತಗೊಳ್ಳುತ್ತದೆ, ಆಗ ಮೆದುಳಿನ ಪೀನೀಯಲ್ ಗ್ಲ್ಯಾಂಡದಿಂದ ಮೆಲಾಟನಿನ್ ದ್ರವವು ಸ್ರವಿಸುವಿಕೆಯನ್ನು, ಗುಹ್ಯ–ಗೋಪ್ಯವೆಂದಿದ್ದಾರೆ, ಮುಂದುವರೆದು ಇಷ್ಟಲಿಂಗದಿಂದ ಅಂಗಭಾವ ಅಳಿದು ಲಿಂಗಭಾವ ಒಡಮೂಡುವ ಈ ಪ್ರಕ್ರೀಯೆಯು ಎಲ್ಲರಿಗೂ ಸಾಧ್ಯವಿಲ್ಲದ ಕಾರಣ ಇದೊಂದು ರಹಸ್ಯ ಸಂಗತಿ. ಕಾರಣ ಸಾಧಕನು ಸಾಧಿಸಬೇಕಾದ ಮಾರ್ಗವನ್ನು ಇಲ್ಲಿ ಅಲ್ಲಮಪ್ರಭುಗಳು ತಿಳಿಸುತ್ತ ಅಂತರಂಗದಕಣ್ಣು ತೆರೆಯದವರಿಗೆ ಇದು ಸಾಧ್ಯವಿಲ್ಲವೆಂದಿದ್ದಾರೆ.

-ರುದ್ರೇಶ ಕಿತ್ತೂರ, ಮುದ್ದೇಬಿಹಾಳ

### ಸಿಂದಗಿಯಲ್ಲಿ ವಿಜಯಪುರ ಜಿಲ್ಲಾ ಪೊಲೀಸ್ ಅಧೀಕ್ಷಕ ಋಷಿಕೇಶ ಸೋನಾವಣೆ ಮಾಹಿತಿ

# ಸಿಗರೇಟ ಕಳ್ಳನ ಬಂಧನ :ರೂ.37 ಲಕ್ಷ ನಗದು ವಶ

**ಉದಯರಶ್ಮಿ ನ್ಯೂಸ್**

ಸಿಂದಗಿ: ಪಟ್ಟಣದ ಡಿ. 24 ರಂದು ರಾತ್ರಿ 9 ಗಂಟೆಯ ಸುಮಾ–ರಿಗೆ ಯಾರೋ ಕಳ್ಳರು ಸಿಂದಗಿ ಪಟ್ಟಣದ ಹಳೇ ಬಜಾರದ ಬಸವಣ್ಣ ದೇವರ ಗುಡಿಯ ಹತ್ತಿರ ಇರುವ ಶಾಂತವೀರಪ್ಪ ತಂದೆ ಗುರುಬಸಪ್ಪ ವಾರದ ಎಂಬುವವರ ಅಂಗಡಿಯಲ್ಲಿ ಒಟ್ಟು 40,87,880/–ರೂ ಕಿಮ್ಮತ್ತಿನ ಸಿಗರೇಟ ಕಳ್ಳತನ ಮಾಡಿಕೊಂಡು ಹೋಗಿದ್ದು, ಪತ್ತೆ ಮಾಡಿಕೊಡಬೇಕು ಡಿ.25 ರಂದು ಸಿಂದಗಿ ಪೊಲೀಸ್ ಠಾಣೆಯಲ್ಲಿ ದೂರು ನೀಡಿದರನ್ವಯ ಖಚಿತ ಮಾಹಿತಿ ಮೇರೆಗೆ ಒಬ್ಬ ಆರೋಪಿಯನ್ನು ಬಂಧಿಸಿ ಆರೋಪಿತನಿಂದ ರೂ.37 ಲಕ್ಷ ಹಾಗೂ ಪ್ರಕರಣದಲ್ಲಿ ಉಪಯೋಗಿಸಿದ ವಾಹನ ಮತ್ತು ವಸ್ತುಗಳನ್ನು ವಶಪಸಿಕೊಳ್ಳಲಾಗಿದೆ ಎಂದು ವಿಜಯಪುರ ಪೊಲೀಸ್ ಅಧೀಕ್ಷಕ ಋಷಿಕೇಶ ಸೋನಾವಣಿ ತಿಳಿಸಿದರು.

ಶುಕ್ರವಾರ ಪಟ್ಟಣದ ಪೊಲೀಸ



ಠಾಣಾ ಆವರಣದಲ್ಲಿ ಆರೋಪಿತನನ್ನು ದಸ್ತಗೀರ ಮಾಡಿ ವಶಪಡಿಸಿಕೊಂಡ ವಸ್ತುಗಳನ್ನು ಪ್ರದರ್ಶಿಸಿ ಮಾತನಾಡಿದ ಅವರು, ವಿಜಯಪುರ ಹೆಚ್ಚುವರಿ ಪೊಲೀಸ್ ಅಧೀಕ್ಷಕ ರಾಮನಗೌಡ ಹಟ್ಟಿ, ಇಂಡಿ ಪೊಲೀಸ್ ಉಪಾಧೀಕ್ಷಕ ಎಚ್.ಎಸ್.ಜಗದೀಶ ರವರ ಮಾರ್ಗದರ್ಶನದಲ್ಲಿ ಸಿಂದಗಿ ವೃತ್ತದ ಸಿ.ಪಿ.ಐ ಡಿ ಹುಲುಗಪ್ಪ, ಇವರ ನೇತೃತ್ವದಲ್ಲಿ ಸಿಂದಗಿ ಠಾಣೆಯ ಪಿ.ಎಸ್.ಐ ಭೀಮಪ್ಪ ರಬಕವಿ, ಅವರು ಗುನ್ನೆ ನಂ: 277/2023, ಕಲಂ: 454, 457, 380 ಐಪಿಸಿ ಪ್ರಕಾರ ಪ್ರಕರಣ ದಾಖಲಾಗಿಸಿಕೊಂಡು ಪ್ರಕರಣವನ್ನು ಕಲೆ ಹಾಕುವ ಮೂಲಕ ಖಚಿತ ಮಾಹಿತಿಯ ಮೆರೆಗೆ ಅರವಿಂದ ಅಂಗಡಿ, ಪಿ.ಎಸ್.ಐ (ಅ.ವಿ) ಮತ್ತು ಸಿಬ್ಬಂದಿ ಜನರಾದ ಜೆ.ಎಸ್. ಗಲಗಲಿ, ಎಚ್.ಎಸ್.ಐಗಲ, ಎಸ್. ಆರ್.ಚವ್ಹಾಣ, ಆರ್.ಎಲ್.ಕಟ್ಟಿಮನಿ, ಪಿ.ಕೆ.ನಾಗರಾಳ, ಎಸ್.ಎಸ್.ರೂಂಡಿ, ಬಿ.ಜೆ.ಮುಳಸಾವಳಗಿ, ಜಿ.ಐ.ಈಟೇರಿ, ಬಿ.ಎಲ್.ಪಟ್ಟೆದ. ಎಸ್.ಪಿ.ಹುಣಶಿಕಟ್ಟಿ, ಎಸ್.ಎಸ್. ನಾಟಕಾರ, ವಿ.ಬಿ.ಡಂಬಳ, ಎಲ್ಲರೂ ಸಿಂದಗಿ ಪೊಲೀಸ್ ಠಾಣೆಯ, ಎಸ್.ಜೆ. ಪಾಟೀಲ, ಎಸ್. ಎನ್. ಸೌದಿ ಆಲಮೇಲ ಪಿ.ಎಸ್ ರವರನ್ನೊಳಗೊಂಡ ತಂಡ ರಚನೆ ಮಾಡಿ ತನಿಖೆಯಲ್ಲಿ ಆರೋಪಿತರು ಅಂತರರಾಜ್ಯ ಕಳ್ಳರ ಗ್ಯಾಂಗಿನವ–ರಿರುವ ಬಗ್ಗೆ ಖಚಿತ ಮಾಹಿತಿ ದೊರೆತ ಮೇರೆಗೆ ಅವರನ್ನು ಪತ್ತೆ ಮಾಡುವ ಕುರಿತು ಸಿಂದಗಿ ಠಾಣೆಯ ಪಿ.ಎಸ್.ಐ ಭೀಮಪ್ಪ ಎಮ್ ರಬಕವಿ ಮತ್ತು ಸಿಬ್ಬಂದಿಗಳಾದ ಆರ್. ಎಲ್.ಕಟ್ಟಿಮನಿ, ಪಿ.ಕೆ.ನಾಗರಾಳ, ಎಸ್.ಎಸ್.ಕೊಂಡಿ ಇವರು ಜ.07 ರಂದು ರಾಜಸ್ಥಾನದಲ್ಲಿ ಆರೋಪಿ ಚಿತೇಂದ್ರಕುಮಾರ ತಂದೆ ಮಾಂಗಿಲಾಲ ಗೆಲ್ಲೋತ್, ವಯಾ: 26 ವರ್ಷ, ಈತನಿಗೆ ವಶಕ್ಕೆ ಪಡೆದುಕೊಂಡು ವಿಚಾರಣೆಯಲ್ಲಿ ಆರೋಪಿತನು ತಾನು ಮತ್ತು ಪ್ರಕಾಶ ತಂದೆ ದೀಪರಾಮ, ಸಾ: ರಾಜೇಂದ್ರನಗರ, ರಾಜ್ಯ: ರಾಜಸ್ಥಾನ. ಗುರುಪ್ರೀತಸಿಂಗ ತಂದೆ ಪಲ್ವಿಂದ್ರಸಿಂಗ, ರಾಜ್ಯ ಪಂಜಾಬ ಮೂವರು ಕೂಡಿಕೊಂಡು ಅಂಗಡಿಯಲ್ಲಿ ಸಿಗರೇಟ ಕಳ್ಳತನ ಮಾಡಿ, ಬೆಂಗಳೂರಿನಲ್ಲಿ ಮಾರಾಟ ಮಾಡಿದ ಬಗ್ಗೆ ಒಪ್ಪಿಕೊಂಡಿದ್ದರಿಂದ ಆತನಿಗೆ ದಸ್ತಗೀರ ಮಾಡಿ ರೂ. 37 ಲಕ್ಷ ಗಳನ್ನು ಮತ್ತು ಕೃತ್ಯದ ಕಾಲಕ್ಕೆ ಉಪಯೋಗಿಸಿದ್ದ ಮಾರುತಿ ಸುಜುಕಿ ಇಕೋ ವ್ಯಾನ (ಕಾರ್) ನಂ:ಕೆಎ–05/ಎಮ್‌ಟಿ–8326 ನೇದ್ದನ್ನು ವಶಪಡಿಸಿಕೊಳ್ಳಲಾಗಿದೆ.

ಈ ಆರೋಪಿತರು ರಾಜ್ಯದ ಬೇರೆ ಬೇರೆ ಪೊಲೀಸ್ ಠಾಣೆ ಹದ್ದಿಗಳಲ್ಲಿಯೂ ಕಳ್ಳತನ ಪ್ರಕರಣಗಳಲ್ಲಿ ಭಾಗಿಯಾಗಿರುವುದು ವಿಚಾರಣೆಯಲ್ಲಿ ತಿಳಿದು ಬಂದಿದೆ ಎಂದು ತಿಳಿಸಿದ ಅವರು, ಈ ಪ್ರಕರಣದ ತನಿಖೆಯಲ್ಲಿ ಕಾರ್ಯಾಚರಣೆ ಮಾಡಿ ಈ ಕೇಸನ್ನು ಬೇಧಿಸಿ ಆರೋಪಿತನನ್ನು ದಸ್ತಗೀರ ಮಾಡಿ ಕಳುವಿನ ಸ್ವತ್ತನ್ನು ವಶಪಡಿಸಿಕೊಂಡಿರುವ ಪೊಲೀಸ್ ಅಧಿಕಾರಿಗಳ ಮತ್ತು ಸಿಬ್ಬಂದಿ ಅವರ ಕಾರ್ಯ ಮೆಚ್ಚುವಂತದ್ದು ಎಂದು ಪ್ರಶಂಸೆ ವ್ಯಕ್ತಪಡಿಸಿದರು.

## ಬಿ.ಎಲ್.ಡಿ.ಇ ಎಸ್.ಬಿ ಕಲಾ ಮತ್ತು ಕೆ.ಸಿ.ಪಿ ವಿಜ್ಞಾನ ಮಹಾವಿದ್ಯಾಲಯದಲ್ಲಿ ರಾಷ್ಟ್ರೀಯ ಯುವ ದಿನಾಚರಣೆ

# ಬಾಹ್ಯ ಪ್ರಲೋಭನೆಗಳಿಗೆ ದಾಸರಾಗದಿರಿ :ಜಮಾದಾರ

**ಉದಯರಶ್ಮಿ ನ್ಯೂಸ್**

ವಿಜಯಪುರ: ಇಂದಿನ ಯುವಕರು ಅನ್ಯ ಚಟಕ್ಕೆ ದಾಸರಾಗದೆ ನಿರ್ದಿಷ್ಟ ಗುರಿಯತ್ತ ಸಾಗಬೇಕು. ಜೀವನದಲ್ಲಿ ಸಾಧನೆ ಮಾಡಬೇಕಾದರೆ ತ್ಯಾಗ ಮತ್ತು ನಿಸ್ವಾರ್ಥಸೇವೆಯನ್ನು ಮಾಡಬೇಕು. ಅದಕ್ಕೆ ಉತ್ತಮ ನಿದರ್ಶನವೇ ಸ್ವಾಮಿ ವಿವೇಕಾನಂದರು ಎಂದು ಜಿಲ್ಲಾ ನೆಹರು ಯುವ ಕೇಂದ್ರ ನಿವೃತ್ತಾಧಿಕಾರಿ ಎಸ್.ಯು ಜಮಾದಾರ ಹೇಳಿದರು.




ನಗರದ ಬಿ.ಎಲ್.ಡಿ.ಇ ಸಂಸ್ಥೆಯ ಎಸ್. ಬಿ. ಕಲಾ ಮತ್ತು ಕೆ.ಸಿ.ಪಿ ವಿಜ್ಞಾನ ಮಹಾವಿದ್ಯಾಲಯದಲ್ಲಿ ರಾಷ್ಟ್ರೀಯ ಯುವ ದಿನಾಚರಣೆ ಮತ್ತು ಸಪ್ತಾಹ ಹಿನ್ನೆಲೆಯಲ್ಲಿ ನೆಹರು ಯುವ ಕೇಂದ್ರ ವಿಜಯಪುರ, ಕರ್ನಾಟಕ ರಾಜ್ಯ ವಿಜ್ಞಾನ ಮತ್ತು ಸಂಶೋಧನಾ ಪರಿಷತ್ತು ವಿಜಯಪುರ, ಜಿಲ್ಲಾ ಆಡಳಿತ ಜಿಲ್ಲಾ ಪಂಚಾಯತ, ಯುವ ಕಾರ್ಯ ಮತ್ತು ಕ್ರೀಡಾ ಸಚಿವಾಲಯ ಬಿ.ಎಲ್.ಡಿ.ಇ ಸಂಸ್ಥೆಯ ಎಸ್. ಬಿ. ಕಲಾ ಮತ್ತು ಕೆ.ಸಿ.ಪಿ ವಿಜ್ಞಾನ ಮಹಾವಿದ್ಯಾಲಯ ಎನ್.ಎಸ್.ಎಸ್ ಘಟಕಗಳು, ಯೂತ್ ರೆಡ್ ಕ್ರಾಸ್ ರೆಡ್ ರಿಬ್ಬನ್ ಕ್ಲಬ್, ಸ್ವಯಂ ಸೇವಾ ಸಂಘ ಸಂಸ್ಥೆಗಳ ಸಂಂ–ಯೋಜನಡಿಯಲ್ಲಿ ಜರುಗಿದ ರಾಷ್ಟ್ರೀಯ ಯುವ ದಿನಾಚರಣೆಯನ್ನುದ್ದೇಶಿಸಿ ಮಾತನಾಡಿದ ಅವರು, ಸ್ವಾಮಿ ವಿವೇಕಾನಂದರು ದೇಶಕಂಡ ಮಹಾನ್ ಚಿಂತಕರು, ಸನ್ಯಾಸಿಗಳು. ಇವರ ಸಂದೇಶಗಳು ಮಾನವನ ಬದುಕಿಗೆ ಉಪಯುಕ್ತವಾದವುಗಳು. ಇಂದಿನ ಯುವಕರು ಅವರು ಹಾಕಿ ಕೊಟ್ಟಿರುವ ಸನ್ಮಾರ್ಗದಲ್ಲಿ ನಡೆಯಬೇಕಾಗಿದೆ. ಸ್ವಾಮಿ ವಿವೇಕಾನಂದರ ಜೀವನ ಯಶೋಗಾಥೆ ಇಂದಿನ ಯುವಕರು ಅಳವಡಿಸಿಕೊಳ್ಳಬೇಕಾಗಿದೆ. ಯುವಕರು ಸದಾ ಉತ್ಸಾಹ ಭರಿತರಾಗಿ, ಸದಾ ದೇಶದ ಪ್ರಜ್ಞಾವಂತ ಪ್ರಜೆಗಳಾಗಿ ಬದುಕಲು ವಿವೇಕಾನಂದರು ಸ್ಫೂರ್ತಿಯಾಗಿದ್ದಾರೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಸಂಪನ್ಮೂಲ ವ್ಯಕ್ತಿಗಳಾದ ಜಿಲ್ಲಾ ಅಗ್ನಿಶಾಮಕ ಅಧಿಕಾರಿ, ರಂಗನಾಥ ರಾಠೋಡ ಮಾತನಾಡಿ, ಕಲಿಕೆಯು ನಿರಂತರ ಪ್ರಕ್ರಿಯೆಯಾಗಿದೆ. ವಿದ್ಯಾರ್ಥಿಗಳು ಸತತವಾಗಿ ಓದಿನಲ್ಲಿ ತೊಡಗಿಸಿಕೊಂಡು ವಿವೇಕಾನಂದರ ಆಚಾರ ವಿಚಾರಗಳನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ಅನ್ಯ ದೇಶಿಯ ಸಂಸ್ಕೃತಿಯನ್ನು ಬಿಟ್ಟು ಪವಿತ್ರವಾದ ನಮ್ಮ ದೇಶದ ಸಂಸ್ಕೃತಿಯನ್ನು ಗೌರವಿಸಿ ಅಳವಡಿಸಿಕೊಳ್ಳಬೇಕು. ವಿದ್ಯಾರ್ಥಿಗಳು ತಮ್ಮ ಮನಸ್ಸನ್ನು ಹತೋಟಿಯಲ್ಲಿಟ್ಟುಕೊಂಡು ದೇಶಸೇವೆಗೆ ಮುಂದಾಗಬೇಕು ಎಂದು ಹೇಳಿದರು.

ಈ ಸಂದರ್ಭದಲ್ಲಿ ಸಂಪನ್ಮೂಲ ವ್ಯಕ್ತಿಗಳಾದ, ಮುಖ್ಯೋಪಾಧ್ಯಾಯರಾದ ಸಂಗಮೇಶ ಪೂಜಾರಿ ಮಾತನಾಡಿದರು. ಮಹಾವಿದ್ಯಾಲಯದ ಪ್ರಾಚಾರ್ಯ ಡಾ.ಆರ್.ಎಂ.ಮಿರ್ದೆ ಮಾತನಾಡಿ, ಜೀವನದಲ್ಲಿ ಅಧ್ಯಾತ್ಮಿಕ ಜ್ಞಾನ ವೃದ್ದಿಯಾಗಬೇಕಾದರೆ ಸ್ವಾಮಿ ವಿವೇಕಾನಂದ ಅವರೆ ಸ್ಫೂರ್ತಿ. ಅವರಂತೆ ನಾವು ನಿರಂತರ ಅದ್ಯಯನಶಿಲರಾಗಬೇಕು ಎಂದು ಹೇಳಿದರು.

ಈ ಸಂದರ್ಭದಲ್ಲಿ ನೆಹರು ಯುವ ಕೇಂದ್ರದ ಅಧಿಕಾರಿ ರಾಹುಲ್. ಎಸ್ ಡೊಂಗ್ರೆ, ಮಹಾವಿದ್ಯಾಲಯದ ಬೋಧಕ ಬೋಧಕೇತರ ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳು ಉಪಸ್ಥಿತ–ರಿದ್ದರು.

# ಥ್ರೋಬಾಲ್ ಪಂದ್ಯಾವಳಿ: ರಾಜ್ಯ ಮಟ್ಟಕ್ಕೆ ಆಯ್ಕೆ

**ಉದಯರಶ್ಮಿ ನ್ಯೂಸ್**

ವಿಜಯಪುರ: ಬಿ.ಎಲ್.ಡಿ.ಇ ಸಂಸ್ಥೆಯ ಎವಿಎಸ್ ಆಯುರ್ವೇದ ಮಹಾವಿದ್ಯಾಲಯದ ವಿದ್ಯಾರ್ಥಿನಿಯರು ಎಬಿವಿಪಿ ವಿಜಯಪುರ ಘಟಕ ಆಯೋಜಿಸಿದ್ದ ಜಿಲ್ಲಾ ಮಟ್ಟದ ಥ್ರೋಬಾಲ್ ವಿವೇಕ್ ಟ್ರೋಫಿ–2024 ಪಂದ್ಯಾವಳಿಯನ್ನು ಗೆದ್ದು, ರಾಜ್ಯ ಮಟ್ಟಕ್ಕೆ ಆಯ್ಕೆಯಾಗಿದೆ.

ಜ್ಞಾನ–ಶೀಲ–ಏಕತೆ ಸಾರಿದ ಸ್ವಾಮಿ ವಿವೇಕಾನಂದರ ಜಯಂತಿ ಸಾಕ್ಷೀಕರಿಸಲು ಮತ್ತು ಸ್ವಾಮಿ ವಿವೇಕಾನಂದ ಜಯಂತಿ ಅಂಗವಾಗಿ ಯುವ ಪೀಳಿಗೆಯ ಸರ್ವಾಂಗೀಣ ಅಭಿವೃದ್ದಿಗಾಗಿ ಎಬಿವಿಪಿ ವಿಜಯಪುರ ಘಟಕ ಖೇಲೋ ಭಾರತ ಅಡಿಯಲ್ಲಿ ಜಿಲ್ಲಾಮಟ್ಟದ ಕ್ರೀಡಾಕೂಟ ಥ್ರೋಬಾಲ್ ಪಂದ್ಯಾವಳಿ ಆಯೋಜಿಸಲಾಗಿತ್ತು.

ಜನೇವರಿ 10 ರಂದು ಬುಧವಾರ ನಗರದ ಡಾ. ಬಿ.ಆರ್.ಅಂಬೇಡ್ಕರ ಕ್ರೀಡಾಂಗಣದಲ್ಲಿ ನಡೆದ ಫೈನಲ್ ಪಂದ್ಯದಲ್ಲಿ ಬಿ.ಎಲ್.ಡಿ.ಇ, ಎ.ವಿ.ಎಸ್ ಆಯುರ್ವೇದ ಮಹಾವಿದ್ಯಾಲಯ, ಬಿ.ಎಲ್.ಡಿ.ಇ ಸಂಸ್ಥೆಯ ಫ. ಗು. ಹಳಕಟ್ಟಿ ಎಂಜಿನಿಯರಿಂಗ್ ಕಾಲೇಜಿನ ವಿರುದ್ಧ ಜಯಗಳಿಸಿ ರಾಜ್ಯ ಮಟ್ಟದ್ದ ಪಂದ್ಯಾವಳಿಗೆ ಪ್ರವೇಶ ಪಡೆಯಿತು.




ಪಂದ್ಯಾವಳಿಯ ನಂತರ ನಡೆದ ಕಾರ್ಯಕ್ರಮದಲ್ಲಿ ವಿಜಯಪುರದ ಬೆನಕಟ್ಟಿ ಪಿಯು ಕಾಲೇಜಿನ ಕಾರ್ಯಾಧ್ಯಕ್ಷೆ ಹೇಮಲತಾ ಬೆನಕಟ್ಟಿ ಮತ್ತು ಪಿಡಿಜೆ ಹೈಸ್ಕೂಲಿನ ನಿವೃತ್ತ ದೈಹಿಕ ಶಿಕ್ಷಕ ಎಸ್. ಎಸ್. ಹಿರೇಮಠ ಪ್ರಶಸ್ತಿ ಪಶಸ್ತಿ ಪ್ರಧಾನ ಮಾಡಿದರು. ವಿಜೇತ ತಂಡದ ನಾಯಕಿ ರಶ್ಮಿ ಇಂಚಗೇರಿ, ಉಪನಾಯಕಿ ಪೂಜಾ ಬಿರಾದಾರ, ತರಬೇತುದಾರ ಹಣಮಂತ ಪವಾರ, ಆಟಗಾರರಾದ ನೇತ್ರಾವತಿ, ಸನಾ, ಸೌಮ್ಯ, ಪಾರ್ವತಿ, ಪ್ರಿಯೇಶಾ, ಅಶ್ವಿನಿ ಪ್ರಶಸ್ತಿ ಸ್ವೀಕ–ರಿಸಿದರು.

ವಿದ್ಯಾರ್ಥಿನಿಯರ ಸಾಧನೆಗೆ ಬಿ.ಎಲ್.ಡಿ.ಇ ಸಂಸ್ಥೆಯ ಅಧ್ಯಕ್ಷ ಎಂ. ಬಿ. ಪಾಟೀಲ, ನಿರ್ದೇಶಕ ಸುನೀಲಗೌಡ ಪಾಟೀಲ, ಪ್ರಾಚಾರ್ಯ ಡಾ. ಸಂಜಯ ಕಡ್ಲಿಮಟ್ಟಿ, ದೈಹಿಕ ನಿರ್ದೇಶಕ ಹಣಮಂತ ಪವಾರ ಹಾಗೂ ಬೋಧಕ, ಬೋಧಕರ ಹೊರತಾದ ಸಿಬ್ಬಂದಿ ಅಭಿನಂದನೆ ಸಲ್ಲಿಸಿದ್ದಾರೆ.

# ಬಸವಣ್ಣನವರ ಚರಿತ್ರೆ ಪ್ರಚಾರ ಅಗತ್ಯ :ಹಂಸಲೇಖ



**ಉದಯರಶ್ಮಿ ನ್ಯೂಸ್**

ಆಲಮಟ್ಟಿ: ಇದೇ ಪ್ರದೇಶದಲ್ಲಿ ಜನಿಸಿರುವ ಮಹಾನ್ ಮಾನವತಾವಾದಿ ಬಸವಣ್ಣನವರ ಚರಿತ್ರೆಯನ್ನು ಸಾರುವ ಒಂದು ಉದ್ಯಾನ ನಿರ್ಮಿಸುವುದು ಅಗತ್ಯವಾಗಿದೆ ಎಂದು ನಾದಬ್ರಹ್ಮ ಹಂಸಲೇಖ ಅಭಿಪ್ರಾಯಪಟ್ಟರು.

ಶುಕ್ರವಾರ ಆಲಮಟ್ಟಿ ಮಯೂರಕೃಷ್ಣದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು ಮೂರು ರಾಜ್ಯಗಳ ಜನತೆಯ ದಾಹ ನೀಗಿಸುವ ಕೃಷ್ಣಾ ನದಿಯು ರಾಜ್ಯದಲ್ಲಿ ಉದ್ದವಾಗಿ ಹರಿದು ಆಲಮಟ್ಟಿ ಅಣೆಕಟ್ಟು ಒಂದರಲ್ಲಿಯೇ 123ಟಿಎಮ್‌ಸಿ ನೀರು ಸಂಗ್ರಹಿಸಿ ಲಕ್ಷಾಂತರ ಎಕರೆ ಭೂಮಿಗೆ ನೀರುಣಿಸುತ್ತಿದೆ. ನಾವು ಕಾವೇರಿ ನದಿಯಲ್ಲಿ ಸಂಗ್ರಹವಾಗುವ ನೀರಿನಲ್ಲಿ ಒಂದು ಟಿಎಮ್‌ಸಿ ಅಡಿ ನೀರಿಗೂ ಹೋರಾಟ ಮಾಡುತ್ತೇವೆ, ಆದರೆ ಆಲಮಟ್ಟಿಯಲ್ಲಿ 123ಟಿಎಮ್‌ಸಿ ಅಡಿ ನೀರು ಸಂಗ್ರಹಿಸುತ್ತಿದ್ದರೂ ಇದರ ಬಗ್ಗೆ ವ್ಯಾಪಕವಾಗಿ ಪ್ರಚಾರದಲ್ಲಿ ಮತ್ತು ಯೋಜನೆಯ ಅನುಷ್ಠಾನದಲ್ಲಿ ವಿಳಂಬವಾಗಲು ಈ ಭಾಗದ ಜನರು ಗಟ್ಟಿ ಧ್ವನಿ ಎತ್ತದೇ ಇರುವುದು ಕಾರಣವಾಗಿದೆ ಎಂದರು.

ಕೃಷ್ಣಾ ನದಿಯ ಬಗ್ಗೆ ಕಿಸಾನರ ಕೃಷಿಕರ ರೈತರ ಲಾಲಬಹಾದ್ದೂರ್ ಆಲಮಟ್ಟಿ ಎಂದು ಇಂದು ನಾಲ್ಕು ಹಾಡುಗಳನ್ನು ರಚಿಸುತ್ತಿದ್ದೇನೆ ಬೆಂಗಳೂರಿಗೆ ಹೋದ ನಂತರ ಈ ಭಾಗದ ಚಿತ್ರೀಕರಣಕ್ಕೆ ತಂಡವನ್ನು ಕಳಿಸಿ, ಈ ಭಾಗದ ಮಹತ್ವದ ಬಗ್ಗೆ ತಿಳಿಸಲು ದೊಡ್ಡ ದೊಡ್ಡ ಚಿತ್ರತಾರೆಯರನ್ನು ಕರೆಸಿ ಹಾಡುಗಳನ್ನು ಬಿಡುಗಡೆಗೊಳಿಸಲಾಗುವುದು. ಆಲಮಟ್ಟಿ ಜಲಾಶಯ ನಿರ್ಮಾಣ–ಕ್ಕೆ 50ವರ್ಷಗಳು ಗತಿಸಿವೆ. ಮುಖ್ಯಮಂತ್ರಿಗಳು ಈ ಪ್ರದೇಶಕ್ಕೆ ಆಗಮಿಸಲಿದ್ದಾರೆ, ಮುಖ್ಯಮಂತ್ರಿಯವ–ರಿಗೆ ಬಸವಣ್ಣನವರ ಕುರಿತು ಈ ಭಾಗದ ಜನರು ಗಟ್ಟಿ ಧ್ವನಿಯಲ್ಲಿ ಹೇಳಬೇಕು. ಇಡೀ ದೇಶದಲ್ಲಿಯೇ ಜಾನಪದ ವಿಶ್ವವಿದ್ಯಾಲಯವಿರುವುದು ನಮ್ಮ ರಾಜ್ಯದಲ್ಲಿ ಮಾತ್ರ. ಅದರ ಸಮಗ್ರ ಅಭಿವೃದ್ಧಿಗೆ ಈ ಹಿಂದಿನ ಬಿಜೆಪಿ ಸರ್ಕಾರದ ಮುಖ್ಯಮಂತ್ರಿಯಾಗಿದ್ದ ಬಸವರಾಜ ಬೊಮ್ಮಾಯಿಯವರಲ್ಲಿ ವಿನಂತಿಸಿಕೊಳ್ಳಲಾಗಿತ್ತು. ಈಗ ಮತ್ತೆ ಈಗಿನ ಮುಖ್ಯಮಂತ್ರಿಯಾಗಿರುವ ಸಿದ್ದರಾಮಯ್ಯನವರಲ್ಲಿಯೂ ವಿನಂತಿಸಿಕೊಳ್ಳಲಾಗುವುದು ಎಂದು ಹೇಳಿದರು.

. ಇಲ್ಲಿ ಸೀತಾವನ ನಿರ್ಮಿಸುತ್ತಿರುವದು ಒಳ್ಳೆಯ ವಿಚಾರ, ಶ್ರೀ ರಾಮನು ಮಹಾರಾಜರಾಗಿದ್ದರು, ಬಸವಣ್ಣನವರು ಸಾಮಾನ್ಯ ಜನರ ಧ್ವನಿಯಾಗಿದ್ದರು, ನುಡಿದಂತೆ ನಡೆದವರು, ಅನುಭವ ಮಂಟಪ ಸ್ಥಾಪಿಸಿದವರು. ಬಸವಣ್ಣನವರ ಬಾಲ್ಯ, ವಿದ್ಯಾಭ್ಯಾಸ, ಮಂತ್ರಿ ಪದವಿ, ಕಲ್ಯಾಣ ಕ್ರಾಂತಿ ಹೀಗೆ ಬಸವಣ್ಣನವರ ಚರಿತ್ರೆಯನ್ನು ಈ ಭಾಗದಲ್ಲಿ ಪ್ರಚುರಪಡಿಸುವುದು ಅಗತ್ಯವಾಗಿದೆ ಎಂದರು.

# ಸ್ವಾಮಿ ವಿವೇಕಾನಂದರ ತತ್ವಾದರ್ಶ ಅಳವಡಿಸಿಕೊಳ್ಳಿ

**ಉದಯರಶ್ಮಿ ನ್ಯೂಸ್**

ವಿಜಯಪುರ: ಯುವಕರು ದೇಶದ ಪ್ರಗತಿಗೆ ಸಹಾಯವಾಗುವ ಸಾಧನೆಗಳನ್ನು ಮಾಡಬೇಕು ಎಂದು ಎಸ್. ಎಸ್. ಪಿಯು ಕಾಲೇಜಿನ ಉಪನ್ಯಾಸಕ ಅಮರೇಶ ಸಾಲಕ್ಕಿ ಹೇಳಿದ್ದಾರೆ.

ತಿಕೋಟಾದಲ್ಲಿ ಬಿ.ಎಲ್.ಡಿ.ಇ, ಸಂಸ್ಥೆಯ ಕಾಲೇಜ್ ಆಫ್ ನರ್ಸಿಂಗ್ ಕಾಲೇಜಿನಲ್ಲಿ ಇಂದು ಶುಕ್ರವಾರ ಸ್ವಾಮಿ ವಿವೇಕಾನಂದರ 160ನೇ ಜಯಂತಿ ಅಂಗವಾಗಿ ನಡೆದ ರಾಷ್ಟ್ರೀಯ ಯುವ ದಿನಾಚಾರಣೆಯಲ್ಲಿ ಅವರು ಉಪನ್ಯಾಸ ನೀಡಿದರು.




ಸ್ವಾಮಿ ವಿವೇಕಾನಂದರ ಜೀವನ, ಆದರ್ಶ ಮತ್ತು ತತ್ವಗಳ ಕುರಿತು ಮಾತನಾಡಿದ ಅವರು, ದೇಶದ ಪ್ರಗತಿಗೆ ಸ್ವಾಮಿ ವಿವೇಕಾನಂದರ ನೀಡಿರುವ ಸಲಹೆಗಳು ಇಂದಿಗೂ ಪ್ರಸ್ತುತವಾಗಿವೆ. ಕ್ರಿಯಾಶಕ್ತಿ, ಇಚ್ಚಾಶಕ್ತಿ, ಮತ್ತು ಜ್ಞಾನಶಕ್ತಿ ಈ ಮೂರನ್ನು ಯಾರು ಸಮರ್ಥವಾಗಿ ಅರ್ಥ ಮಾಡಿಕೊಳ್ಳಬೇಕು. ಅದಕ್ಕೆ ತಕ್ಕಂತೆ ಜೀವನ ನಡೆಸಬೇಕು. ಸ್ವಾಮಿ ವಿವೇಕಾನಂದರ ತತ್ವಾದರ್ಶಗಳನ್ನು ಜೀವನದಲ್ಲಿ ಅಳವಡಿಸಿಕೊಂಡು ಮುಂದುವರೆಯಬೇಕು ಎಂದು ಹೇಳಿದರು.

ಸ್ವಾಮಿ ವಿವೇಕಾನಂದ ಕು–ರಿತು ಆಯೋಜಿಸಲಾಗಿದ್ದ ಭಾಷಣ ಸ್ಪರ್ಧೆಯ ವಿಜೇತ ವಿದ್ಯಾರ್ಥಿಗಳಿಗೆ ಬಹುಮಾನ ವಿತರಿಸಲಾಯಿತು.

ಈ ಸಂದರ್ಭದಲ್ಲಿ ಕಾಲೇಜಿನ ಪ್ರಾಚಾರ್ಯ ಡಾ. ಪ್ರಕಾಶ ಸಿದ್ದಾಪುರ, ಕಾರ್ಯಕ್ರಮದ ಸಂಯೋಜಕ ಆಕಾಶ ಜಾಧವ, ಸಂತೋಷ ಇಂಡಿ, ಸಿದ್ದು ತಡಲಗಿ, ಬಸಲಿಂಗಮ್ಮ ಹಯ್ಯಾಳ, ಸಿದ್ದಮ್ಮ ನವದಗಿ, ಪ್ರಶಾಂತ ಈಶ್ವರ, ರವಿ ದೇಸಾಯಿ, ಸಾಹೇಬಗೌಡ ಬಿರಾದರ, ಶೋಭಾ ಜುಮನಾಳ, ಆದಿಲ್ ಜಮಾದಾರ ಮುಂತಾದವರು ಉಪಸ್ಥಿತರಿದ್ದರು.

ಗಿತಾಂಜಲಿ ಕೋಣ್ಣೂರು ಸ್ವಾಗತಿಸಿದರು. ಲಕ್ಷ್ಮಿ ಪಾಟೀಲ ವಂದಿಸಿದರು.

# ಸ್ವಾಮಿ ವಿವೇಕಾನಂದ ಜಯಂತಿ ಆಚರಣೆ

**ಉದಯರಶ್ಮಿ ನ್ಯೂಸ್**

ಮುದ್ದೇಬಿಹಾಳ: ಪಟ್ಟಣದ ಜ್ಞಾನ ಭಾರತಿ ವಿದ್ಯಾ ಮಂದಿರ ಶಾಲೆಯಲ್ಲಿ ಸ್ವಾಮಿ ವಿವೇಕಾನಂದರ ಜಯಂತಿಯ ಆಚರಣೆ ಮಕ್ಕಳ ಛದ್ಮವೇಷದೊಂದಿಗೆ ನೆರವೇರಿತು.



ಈ ವೇಳೆ ಶಿಕ್ಷಕ ಎಮ್.ಬಿ.ಪಾಟೀಲ, ಸಂಸ್ಥೆಯ ಅಧ್ಯಕ್ಷ ಬಿ.ಪಿ.ಕುಲಕರ್ಣಿ, ಉಪಾಧ್ಯಕ್ಷ ಡಾ.ಎಸ್.ಬಿ.ವಡವಡಗಿ, ಕಾರ್ಯದರ್ಶಿ ಪಿ.ಎಸ್.ಕಡಿ, ನಿರ್ದೇಶಕ ಬಿ.ಎ.ನಾಲತವಾಡ, ಶಾಂತಾ ಭಟ್ಟ, ರಾಮಚಂದ್ರ ಹೆಗಡೆ, ಜಿ.ಜೆ.ಪಾದಗಟ್ಟಿ, ರಂಜಿತಾ ಭಟ್ಟ, ಮಂಜುನಾಥ ಪಡದಾಳಿ, ಕೀರ್ತಿ ತಳಗೇರಿ, ತೇಜಸ್ವಿನಿ ಕಾಟಿ, ಅನ್ನಪೂರ್ಣ ನಾಗರಾಳ. ಸರಸ್ವತಿ ಮಡಿವಾಳರ್, ಸೇರಿದಂತೆ ಇತರರು ಇದ್ದರು.

# ಜ.23ರಂದು ಆದಿಶೇಷ ಹಿರೇಮಠದ ಜಾತ್ರೆ

**ಉದಯರಶ್ಮಿ ನ್ಯೂಸ್**

ಸಿಂದಗಿ: ಪಟ್ಟಣದ ಆದಿಶೇಷ ಸಂಸ್ಥಾನ ಹಿರೇಮಠದ 28ನೆಯ ಜಾತ್ರಾಮಹೋತ್ಸವದ ನಿಮಿತ್ತ ಜ. 14ರಿಂದ ಜ.23ವರೆಗೆ ಎಡಿಯೂರ ಶ್ರೀ ಸಿದ್ದಲಿಂಗೇಶ್ವರ ಪುರಾಣ ಪ್ರವಚನ ಕಾರ್ಯಕ್ರಮ ಪ್ರಾರಂಭೋತ್ಸವ ಹಾಗೂ ಜ.23ರಂದು ಬೆಳಿಗ್ಗೆ ಶ್ರೀಮದ್ ರಂಭಾಪುರಿ ಜಗದ್ಗುರುಗಳ ಭವ್ಯ ಮೆರವಣಿಗೆ ಹಾಗೂ ಧರ್ಮಸಭೆ ನಡೆಯಲಿದೆ ಎಂದು ಆದಿಶೇಷ ಸಂಸ್ಥಾನ ಹಿರೇಮಠದ ನಾಗರತ್ನ ರಾಜಯೋಗಿ ವೀರರಾಜೇಂದ್ರ ಸ್ವಾಮಿಗಳು ತಿಳಿಸಿದರು.



ಪಟ್ಟಣದ ಶ್ರೀಮಠದಲ್ಲಿ ಸುದ್ದಿಗೋಷ್ಠಿ ನಡೆಸಿದ ಶ್ರೀಗಳು, ಜ.23ರ ಜಾತ್ರಾಮಹೋತ್ಸವ ಕಾರ್ಯಕ್ರಮಕ್ಕೆ ವಿಜಯಪುರ ಜಿಲ್ಲಾ ಉಸ್ತುವಾರಿ ಸಚಿವ ಎಂ ಬಿ. ಪಾಟೀಲ ಅವರಿಗೂ ಆವ್ಹಾನ ನೀಡಲಾಗಿದೆ. ಅವರು ಸೇರಿದಂತೆ ಕ್ಷೇತ್ರದ ಶಾಸಕ ಅಶೋಕ ಮನಗೂಳಿ ಅವರಾದಿಯಾಗಿ ಜನಪ್ರತಿನಿಧಿಗಳು ಅಂದಿನ ಧರ್ಮಸಭೆಯಲ್ಲಿ ಪಾಲ್ಗೊಳ್ಳಲಿದ್ದಾರೆ ಎಂದರು.

ಜ.14ರಿಂದ ಜ.23ರವರೆಗೆ ಸಂಜೆ 6.30 ಗಂಟೆಗೆ ಶ್ರೀಮಠದ ಆವರಣದಲ್ಲಿ ಎಡಿಯೂರ ಸಿದ್ದಲಿಂಗೇಶ್ವರರ ಮಹಾಪುರಾಣ ಪ್ರವಚನ ಕಾರ್ಯಕ್ರಮ ನಡೆಯುವುದು. ಜ.22ರಂದು ರಂದು ಸದ್ಗುರು ಶಿವಯೋಗಿ ಡಾ.ಚಂದ್ರಶೇಖರ ಸ್ವಾಮಿಗಳು ಜಾಹಗೀರದಾರ ಅವರ 53ನೆಯ ವರ್ಷದ ಅನುಷ್ಠಾನದ ಸುವರ್ಣ ಮಹೋತ್ಸವ, ಜಂಗಮವಟುಗಳಿಗೆ ಅಯ್ಯಾಚಾರ ಮತ್ತು ಲಿಂಗದೀಕ್ಷೆ ಕಾರ್ಯಕ್ರಮ ಜರುಗುವುದು ಎಂದು ತಿಳಿಸಿದರು.

ಜ.23ರ ಬೆಳಗಿನ ಬ್ರಾಹ್ಮೀ ಮುಹೂರ್ತದ 5 ಗಂಟೆಗೆ ಆಶ್ಲೇಷ ನಾಗಪೂಜೆ ನಡೆಯಲಿದೆ. ಈ ವೇಳೆ ಕಾಳಸರ್ಪದೋಷ, ಕುಜದೋಷ ಸಮಸ್ಯೆಗಳಿಗೆ ಮುಕ್ತಿ ಕೊಡಲಾಗುತ್ತಿದ್ದು, ಆಸಕ್ತರು ಮುಂಚಿತವಾಗಿ ಶ್ರೀಮಠದಲ್ಲಿ ತಮ್ಮ ಹೆಸರನ್ನು ನೊಂದಾಯಿಸಬೇಕು ಎಂದು ಕರೆ ನೀಡಿದರು.

ಶ್ರೀಮಠದ ಜಾತ್ರಾ ಮಹೋತ್ಸವ ನಿಮಿತ್ತ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದ್ದು, ಶ್ರೀಮಠದ ಭಕ್ತರು ಪಾಲ್ಗೊಂಡು ಜಗದ್ಗುರುಗಳ ಆಶೀರ್ವಾದ ಪಡೆದು ಪುನೀತರಾಗಬೇಕು ಎಂದು ಹೇಳಿದರು.

ಈ ವೇಳೆ ಎಂ.ಎಂ ಹಂಗರಗಿ, ಚಂದ್ರಶೇಖರ ನಾಗರಬೆಟ್ಟ, ಮಲ್ಲನಗೌಡ ಬಿರಾದಾರ ಇಬ್ರಾಹಿಂಪುರ, ಆನಂದ ಶಾಬಾದಿ, ಪಂಡಿತ ಯಂಪುರೆ ಸೇ–ರಿದಂತೆ ಶ್ರೀಮಠದ ಭಕ್ತರು ಇದ್ದರು.

# ಸ್ವಾಮಿ ವಿವೇಕಾನಂದರು ಶ್ರೇಷ್ಠ ಆಧ್ಯಾತ್ಮಿಕ ನಾಯಕ

**ಉದಯರಶ್ಮಿ ನ್ಯೂಸ್**

ಆಲಮೇಲ: ಪಟ್ಟಣದ ಸ್ವಾಮಿ ವಿವೇಕಾನಂದ ಸಂಘ(ರಿ) ವತಿಯಿಂದ ಸ್ವಾಮಿವೇಕಾನಂದರ 161ನೇ ಜಯಂತಿಯನ್ನು ಆಚರಿಸಲಾಯಿತು.



ಈ ವೇಳೆ ಮಾತನಾಡಿದ ಸಂಘದ ಸದಸ್ಯ ರತನಟಾಟ ಒನಕುದರೆ ಸ್ವಾಮಿ ವಿವೇಕಾನಂದರು ಭಾರತ ನಿರ್ಮಿಸಿದ ಅತ್ಯಂತ ಶ್ರೇಷ್ಠ ಆಧ್ಯಾತ್ಮಿಕ ನಾಯಕರಲ್ಲಿ ಒಬ್ಬರು ಅವರ ಜೀವನದ ಕಥೆಯು ಸ್ಫೂರ್ತಿಯಾಗಿದೆ ಎಂದು ಹೇಳಿದರು


ಈಗಿನ ಯುವಪಿಳಿಗೆಯವರಾದ ನಾವುಗಳು ದುಷ್ಚಟಗಳ ದಾಸರಾಗದೆ ಧರ್ಮ ರಕ್ಷಣೆಯ ಕಡೆಗೆ ಮಹಾನ ನಾಯಕರು ಹಾಕಿಕೊಟ್ಟ ಉತ್ತಮವಾದ ಜೀವನದ ಕಡೆಗೆ ಸಾಗಬೇಕಿದೆ

ಇದೆ ತಿಂಗಳ ಕೋನೆಯಲ್ಲಿ ನಮ್ಮ ಸಂಘದ ವತಿಯಿಂದ ಉಚಿತ ನೇತ್ರ ತಪಾಸಣ ಶಿಬಿರ ಮತ್ತು ರಕ್ತದಾನ ಶಿಬಿರ ಹಾಗೂ ಸ್ವಾಮಿ ವಿವೇಕಾನಂದರ ಉಪನ್ಯಾಸ ಕಾರ್ಯಕ್ರಮ ಮಾಡಲಿದ್ದವೆ ಎಂದರು

ವಿಶ್ವ ಅಮರಗೊಂಡ, ಮದನ ರಜಪೂತ, ವಿಶ್ವ ಕೊರಳ್ಳಿ, ಶರಣು ಗುರಕಾರ, ಕಮಲಾಕರ ಪತ್ತಾರ, ಅಶೋಕ ಪರಿಟ, ಅಜಯ ಬಂಟನೂರ ಮುಂತಾದವರು ಇದ್ದರು.

# ವಿವೇಕಾನಂದರ ವಿಚಾರಧಾರೆ ಮೈಗೂಡಿಸಿಕೊಳ್ಳಬೇಕು

ಉದಯರಶ್ಮಿ ನ್ಯೂಸ್



ದೇವರಹಿಪ್ಪರಗಿ: ಸರಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಸ್ವಾಮಿ ವಿವೇಕಾನಂದರ 161ನೇ ಜಯಂತಿ ಅಂಗವಾಗಿ ಭಾವಚಿತ್ರಕ್ಕೆ ಪೂಜೆ ಹಾಗೂ ಪುಷ್ಪನಮನ ಸಲ್ಲಿಸಿ ರಾಷ್ಟ್ರೀಯ ಯುವ ದಿನಾಚರಣೆ ಆಚರಿಸಲಾಯಿತು.

ಪಟ್ಟಣದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಶುಕ್ರವಾರ ಯುವರೆಡ್ ಕ್ರಾಸ್, ಸಾಂಸ್ಕೃತಿಕ ವಿಭಾಗ, ಎನ್‌ಎಸ್‌ಎಸ್ ಘಟಕ ಮತ್ತು ಐಕ್ಯೂಸಿ ವಿಬಾಗದ ಸಹಯೋಗದಲ್ಲಿ ಜರುಗಿದ ಕಾರ್ಯಕ್ರಮವನ್ನು ಪ್ರಾರ್ಥನೆಯೊಂದಿಗೆ ಪ್ರಾರಂಭಿಸಲಾಯಿತು.

ಈ ಸಂದರ್ಭದಲ್ಲಿ ಕರ್ನಾಟಕ ರಕ್ಷಣಾ ವೇದಿಕೆ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಸುರೇಶ ಬಿಜಾಪುರ ಮಾತನಾಡಿ, ಸ್ವಾಮಿ ವಿವೇಕಾನಂದರ ವಿಚಾರಧಾರೆಗಳನ್ನು ಮೈಗೂಡಿಸಿಕೊಂಡು ವಿದ್ಯಾರ್ಥಿಗಳು ಯುವಭಾರತವನ್ನು ನಿರ್ಮಿಸಲು ಮುಂದಾಗಬೇಕು. ವಿವೇಕಾನಂದರು ತಮ್ಮ ಚಿಂತನೆಗಳಿಂದ ಇಡೀ ಜಗತ್ತಿಗೆ ಮಾದರಿಯಾಗಿ, ಭವ್ಯ ಭಾರತದ ಹೆಸರನ್ನು ಅಜರಾಮರವಾಗಿರಿಸಿದ್ದಾರೆ. ಇಂತಹ ಮಹಾನ್ ಚೇತನರ ತತ್ವಾದರ್ಶಗಳು ಯುವಜನತೆ ಅಳವಡಿಸಿಕೊಳ್ಳಬೇಕು ಎಂದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಪ್ರಾಂಶುಪಾಲ ಅಶೋಕ ಹೆಗಡೆ ವಹಿಸಿದ್ದರು.

ಇದೇ ಸಂದರ್ಭದಲ್ಲಿ ವಿದ್ಯಾರ್ಥಿಗಳಿಗೆ ಯುವ ದಿನದ ಕುರಿತು ವಿವಿಧ ವಿಷಯಯಗಳ ಮೇಲೆ ಲಘು ಭಾಷಣಣವನ್ನು ಏರ್ಪಡಿಸಿ, ಬಹುಮಾನ ಮತ್ತು ಪ್ರಮಾಣ ಪತ್ರವನ್ನು ವಿತರಿಸಲಾಯಿತು.

ಉಪನ್ಯಾಸಕರುಗಳಾದ ಆಕ್ರಮ್ ಪಾಷಾ, ಡಾ.ದಾಕ್ಷಾಯಣಮ್ಮ ಎನ್.ಸಿ, ಶಿವಪುತ್ರ ಜಾಲವಾದಿ, ಪ್ರೇಮಕುಮಾರಿ ಪಿ. ದೈಹಿಕ ಶಿಕ್ಷಣ ನಿರ್ದೇಶಕ ಡಾ.ಅಶೋಕಕುಮಾರ ಜಾಧವ, ತುಳಸಿಗಿರೀಶ್ ಫೌಂಡೇಶನ್ ಸದಸ್ಯ ಮೋಹನ್ ಚವ್ಹಾಣ್, ರವಿ ರಾಠೋಡ್ ಸೇರಿದಂತೆ ಬೋಧಕೇತರ ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳು ಭಾಗವಹಿಸಿದ್ದರು.

# ಸಿಂಹಗಢ ಮಹಾರಾಜರ ಪುಣ್ಯಾರಾಧನೆ ಆರಂಭ

ಉದಯರಶ್ಮಿ ನ್ಯೂಸ್



ಚಡಚಣ: ಸಮೀಪದ ರೇವತಗಾಂವ ಗ್ರಾಮದ ಶ್ರೀ ಸಿಂಹಗಢ ಮಹಾರಾಜರ 54 ನೇ ಪುಣ್ಯಾರಾಧನೆಯ ನಿಮಿತ್ತ ಗುರುವಾರ ರಾತ್ರಿ ಎಳ್ಳ ಅಮವಾಸ್ಯೆಯ ನಿಮಿತ್ತ ರಾತ್ರಿ 9 ಗಂಟೆಗೆ 'ವೀಣೆ ನಿಲ್ಲಿಸುವ' ಹಾಗೂ ಮರಾಠಾ ಭಜನಾ ಕಾರ್ಯಕ್ರಮಗಳೊಂದಿಗೆ ಪುಣ್ಯಾರಾಧನೆಯ ಕಾರ್ಯಕ್ರಮಗಳು ಪ್ರಾರಂಭವಾದವು.

# ಯುವ ಕಾರ್ಮಿಕರಿಗೆ ಪರಿಕರಗಳ ವಿತರಣೆ



ಉದಯರಶ್ಮಿ ನ್ಯೂಸ್

ದೇವರಹಿಪ್ಪರಗಿ: ಯುವ ಕಾರ್ಮಿಕರು ವೃತ್ತಿಯ ಜೊತೆಗೆ ತಮ್ಮ ಆರೋಗ್ಯ ಹಾಗೂ ಕುಟುಂಬದ ಕುರಿತು ಹೆಚ್ಚು ಕಾಳಜಿ ವಹಿಸಬೇಕು ಎಂದು ಉದ್ಯಮಿ ಕೆ.ಎ.ಸಾಲಕ್ಕಿ ಹೇಳಿದರು.

ಪಟ್ಟಣದಲ್ಲಿ ಶುಕ್ರವಾರ ರಾಷ್ಟ್ರೀಯ ಯುವ ದಿನಾಚರಣೆ ಅಂಗವಾಗಿ ಯುವಕಾರ್ಮಿಕರಿಗೆ ಅಗತ್ಯ ಪರಿಕರಗಳನ್ನು ವಿತರಿಸಿ ಮಾತನಾಡಿದರು.

ಕಾರ್ಮಿಕರ ಬೇಡಿಕೆಗಳ ಅನುಗುಣವಾಗಿ ಅಲ್ಟ್ರಾಟೆಕ್ ಸಿಮೆಂಟ್ ಜೊತೆಗೂಡಿ ಪ್ರತಿ ತಿಂಗಳು ಕೌಶಲ್ಯಯುತ, ಶ್ರಮಿಕ ಕಾರ್ಮಿಕರನ್ನು ಗುರುತಿಸಿ ಅವರ ದೈನಂದಿನ ಜೀವನಕ್ಕೆ ಉಪಯೋಗವಾಗಬಹುದಾದ ಪರಿಕರಗಳನ್ನು ನೀಡುವುದರ ಮೂಲಕ ಅವರ ಕಾರ್ಯತತ್ಪರತೆಯನ್ನು ಉತ್ತೇಜಿಸಲಾಗುತ್ತಿದೆ. ಇದರ ಸದುಪಯೋಗವನ್ನು ವರ್ಷದ ಎಲ್ಲ ತಿಂಗಳಲ್ಲಿ ಪಟ್ಟಣದ ಬಹುತೇಕ ಕಾರ್ಮಿಕ ಬಂಧುಗಳು ಪಡೆದುಕೊಳ್ಳುತ್ತಾರೆ ಎಂದರು.

ರವಿ ವಡ್ಡೋಡಗಿ, ಈರಣ್ಣ ಸರೂರ, ಗುತ್ತಿಗೆದಾರ ರವಿ ಮೆಟಗಾರ, ಕಾರ್ಮಿಕರಾದ ಹಸನ್‌ಸಾಬ್ ಬಾಗವಾನ, ಅಬ್ದುಲ್‌ಸಾಬ್ ನದಾಫ್, ಶ್ರೀಶೈಲ ರಾಮಗೊಂಡ, ಅಲ್ಟ್ರಾಟೆಕ್ ಕಂಪನಿಯ ತಾಂತ್ರಿಕ ಸಿಬ್ಬಂದಿ ನಾಗರಾಜ್, ವಿಶ್ವನಾಥ ಸೇರಿದಂತೆ ಇತರರು ಇದ್ದರು.

# ಮಕ್ಕಳಿಗೆ ಪ್ರಚಲಿತ ವಿದ್ಯಮಾನಗಳ ವಿವರಣೆ ಅಗತ್ಯ

ಉದಯರಶ್ಮಿ ನ್ಯೂಸ್



ಕೊಲ್ಹಾರ: ಮಕ್ಕಳಿಗೆ ಸಮಾಜದಲ್ಲಿ ಆಗುತ್ತಿರುವ ಬದಲಾವಣೆಯ ಆಗು ಹೋಗುಗಳ ಕುರಿತು ಮತ್ತು ಇಂದಿನ ರಾಜಕೀಯ ವ್ಯವಸ್ಥೆಯ ಪ್ರಚಲಿತ ವಿದ್ಯಮಾನಗಳ ವಿವರಣೆಯನ್ನು ಪಾಠದ ಜೊತೆಗೆ ಶಿಕ್ಷಕರು ಭೋದಿಸಿದರೆ ಮಕ್ಕಳು ಹೆಚ್ಚಿನ ಜ್ಞಾನಾರ್ಜನೆಯನ್ನು ಪಡೆದುಕೊಳ್ಳಲು ಸಾಧ್ಯವಾಗುತ್ತದೆ ಎಂದು ಬಾಗಲಕೋಟ ಬಸವೇಶ್ವರ ಅಂತರಾಷ್ಟ್ರೀಯ ಪಬ್ಲಿಕ್ ಸ್ಕೂಲ್ ಪ್ರಾಚಾರ್ಯ ಸುರೇಶ ಹೆಗಡೆ ಹೇಳಿದರು.

ಪಟ್ಟಣದ ವಿಶ್ವಭಾರತಿ ವಿದ್ಯಾವರ್ಧಕ ಸಂಸ್ಥೆಯ ಆವರಣದಲ್ಲಿ ಯಲ್ಲಮ್ಮದೇವಿ ಸಿಬಿಎಸ್‌ಸಿ ಶಾಲೆಯ ಮಕ್ಕಳಿಂದ ನಡೆದ ಪಾದಪೂಜೆ ಕಾರ್ಯಕ್ರಮ, ವಿಷಯವಾರು ಹಾಗೂ ವಿಜ್ಞಾನ ತಂತ್ರಜ್ಞಾನದ ಕುರಿತು ಮಕ್ಕಳು ರಚಿಸಿದ ವಸ್ತುಪ್ರದರ್ಶನದ ಉದ್ಘಾಟಣೆ ಸ್ವಾಮಿ ವಿವೇಕಾನಂದರ ಜಯಂತಿ ಯುವ ದಿನೋತ್ಸವ ಸಮಾರಂಭವನ್ನು ಉದ್ಘಾಟಿಸಿ ಮಾತನಾಡುತ್ತಿದ್ದರು.

ಜನ್ಮ ಕೊಟ್ಟ ತಂದೆ ತಾಯಿಗಳ ಋಣವನ್ನು ತೀರಿಸಲು ಯಾವ ಕಾಲಕ್ಕೂ ಸಾಧ್ಯವಾಗದಂತಹ ಋಣಾನುಬಂಧದ ಬಂಧನವಾಗಿರುತ್ತದೆ ಅವರುಗಳ ಸೇವೆಯನ್ನು ಪಾದಪೂಜೆಯಂತಹ ಸಂಸ್ಕಾರಯುತ ಸಂಸ್ಕೃತಿಯನ್ನು ತೋರಿಸಿಕೊಡುವ ಇಂಥಹ ಕಾರ್ಯಕ್ರಮಗಳಿಂದ ಸ್ವಲ್ಪ ಮಟ್ಟಿಗಾದರೂ ಜನ್ಮದಾತರಿಗೆ ಕೃತಜ್ಞತೆ ಸಲ್ಲಿಸಲು ಸಾಧ್ಯವಾಗುತ್ತದೆ. ಶಿಕ್ಷಕರು ಅನುಕೂಲಕರವಾಗುವ ವಿದ್ಯೆಯನ್ನು ಯಾರ ಮುಖಾಂತರವಾದರೂ ಕಲಿಯುವ ಸ್ವಾರ್ಥಿಗಳಾಗಿ ವಿಧ್ಯಾರ್ಥಿಗಳಿಗೆ ಭೋಧನೆ ಮಾಡುವ ಉತ್ತಮ ನಡವಳಿಕೆಯನ್ನು ಅಳವಡಿಸಿಕೊಳ್ಳಬೇಕು ಎಂದು ಕರೆಕೊಟ್ಟರು.

ರೋಣಿಹಾಳ ಹಿರೇಮಠದ ರಾಜಶೇಖರಯ್ಯ ಹಿರೇಮಠ, ಬಳೂತಿಯ ಶಂಕ್ರಯ್ಯ ಚಿಕ್ಕಮಠ ಸಾನಿಧ್ಯವನ್ನು ವಹಿಸಿದ್ದರು. ಅತಿಥಿಗಳಾಗಿ ಈರಪ್ಪ ಬಾಟಿ, ನೀಲಮ್ಮ ಮಲ್ಲಿಕಾರ್ಜುನ ಬೆಳ್ಳುಬ್ಬಿ, ಸವಿತಾ ಚಂದ್ರಶೇಖರ ಬೆಳ್ಳುಬ್ಬಿ, ಸಾವಿತ್ರಿ ಮೇತ್ರಿ, ಬಸವರಾಜ ಸಜ್ಜನ, ಸಂಸ್ಥೆಯ ಆಡಳಿತಾಧಿಕಾರಿ ಬಿ.ಎಸ್.ನಿಂಬಾಳ್ಕರ ಉಪಸ್ಥಿತರಿದ್ದರು.

ನಿರ್ಣಾಯಕರಾಗಿ ಶ್ರೀಶೈಲ ಯಡಹಳ್ಳಿ, ಸಲೀಂ ಡಾಂಗೆ ಶಿಕ್ಷಕರು ಭಾಗವಹಿಸಿದ್ದರು. ಪೂಜಾ ಬಾಟಿ ನಿರೂಪಿಸಿದರು.

ಸಂಸ್ಥೆಯ ಶಿಕ್ಷಕ ವೃಂದದವರು ಸಿಬ್ಬಂಧಿ ವರ್ಗದವರು ವಿದ್ಯಾರ್ಥಿಗಳ ಪಾಲಕರು ಸಭೆಗೆ ಆಗಮಿಸಿದ್ದರು. ಮಕ್ಕಳಿಂದ ಪಾಲಕರಿಗೆ ಪಾದಪೂಜೆ ನೆರವೇರಿತು.

# ವಿವೇಕಾನಂದರ ವಿಚಾರ ಧಾರೆಗಳು ಸ್ಫೂರ್ತಿದಾಯಕ :ಲಮಾಣಿ

ಉದಯರಶ್ಮಿ ನ್ಯೂಸ್



ವಿಜಯಪುರ: ವಿವೇಕಾನಂದರ ವಿಚಾರ ಧಾರೆಗಳು ವಿಶೇಷವಾಗಿ ಯುವಕರನ್ನು ಪ್ರೇರೇಪಿಸುತ್ತದೆ ಮತ್ತು ಅವರ ಜೀವನವನ್ನು ರೂಪಿಸಲು ಸಹಾಯ ಮಾಡುತ್ತದೆ. ಭಾರತೀಯ ಯುವ ಜನಾಂಗಕ್ಕೆ ಸ್ವಾಮಿ ವಿವೇಕಾನಂದರ ಆದರ್ಶ ಹಾಗೂ ವಿಚಾರ ಧಾರೆಗಳು ಸ್ಫೂರ್ತಿದಾಯಕವಾಗಲಿವೆ ಎಂದು ಬಂಜಾರಾ ಪ್ರೌಢ ಶಾಲೆಯ ಮುಖ್ಯ ಗುರು ಇ.ಡಿ.ಲಮಾಣಿ ಹೇಳಿದರು.

ವಿಜಯಪುರ ಜಿಲ್ಲಾ ಬಂಜಾರಾ ವಿದ್ಯಾವರ್ಧಕ ಸಂಘದ ಬಂಜಾರಾ ಕನ್ನಡ ಹಾಗೂ ಆಂಗ್ಲ ಮಾಧ್ಯಮ ಪ್ರೌಢ ಶಾಲೆಗಳ ಸಂಯುಕ್ತಾಶ್ರಯದಲ್ಲಿ ಶುಕ್ರವಾರದಂದು ಸ್ವಾಮಿ ವಿವೇಕಾನಂದರ ಜನ್ಮದಿನ ಹಾಗೂ ರಾಷ್ಟ್ರೀಯ ಯುವ ದಿನದ ಅಂಗವಾಗಿ ಹಮ್ಮಿಕೊಂಡಿದ್ದ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, 'ಜಾತಿ ಎಂಬುದು ಸಮಾಜದ ಒಂದು ಆಂತರಿಕ ಭಾಗವಾಗಿದೆ. ಹಿಂದೆ ಅದು ವಿಕಾಸವಾಗುತ್ತಿತ್ತು. ಈಗ ಅದು ಘನೀಭೂತವಾಗಿದೆ. ಅದು ದುರ್ಗಂಧದಿಂದ ಭಾರತದ ವಾತಾವರಣವೆಲ್ಲ ತುಂಬಿದೆ ಎಂದು ಸ್ವಾಮಿ ವಿವೇಕಾನಂದರು ಕೋಮುವಾದದ ಕಟ್ಟಾ ವಿರೋಧಿಯಾಗಿದ್ದರು ಎಂದು ಹೇಳಿದರು.


ಶಿಕ್ಷಕ ಎಸ್.ವಿ.ದೇಶಪಾಂಡೆ ಪ್ರತಿಜ್ಞಾ ವಿಧಿ ಭೋಧಿಸಿದರು.

ಈ ವೇಳೆ ಆಂಗ್ಲ ಮಾಧ್ಯಮ ಪ್ರೌಢ ಶಾಲೆಯ ಮುಖ್ಯ ಗುರು ಸಂದೀಪ ರಾಠೋಡ, ಸೇರಿದಂತೆ ಕನ್ನಡ ಹಾಗೂ ಆಂಗ್ಲ ಮಾಧ್ಯಮ ಪ್ರೌಢ ಶಾಲೆಗಳ ಶಿಕ್ಷಕರುಗಳು, ಸಿಬ್ಬಂದಿ ವರ್ಗ, ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಕಾರ್ಯಕ್ರಮದ ಸ್ವಾಗತ, ನಿರೂಪಣೆ ಹಾಗೂ ವಂದನಾರ್ಪಣೆಯನ್ನು ಆರ್.ವ್ಹಿ.ಬುಜಂಗನವರ ನೇರವೇರಿಸಿದರು.

# ಸ್ವಾಮಿ ವಿವೇಕಾನಂದರು ಯುವಕರ ಪ್ರೇರಣೆಯ ಚಿಲುಮೆ

ಉದಯರಶ್ಮಿ ನ್ಯೂಸ್




ಇಂಡಿ: ಸ್ವಾಮಿ ವಿವೇಕಾನಂದರ ಜೀವನ ಮತ್ತು ವ್ಯಕ್ತಿತ್ವ ಕೋಟಿ ಕೋಟಿ ಯುವಕರಿಗೆ ಪ್ರೇರಣೆಯ ಚಿಲುಮೆಯಾಗಿದೆ. ಅವರು ಭಾರತ ದೇಶದ ಕೀರ್ತಿ ಪತಾಕೆಯನ್ನು ವಿಶ್ವಮಟ್ಟದಲ್ಲಿ ಪಸರಿಸಿದ ಧೀಮಂತ ನಾಯಕರು. 1893 ರಲ್ಲಿ ಚಿಕ್ಯಾಗೋದಲ್ಲಿ ನಡೆದ ವಿಶ್ವಧರ್ಮ ಸಮ್ಮೇಳನದಲ್ಲಿ ನೀಡಿದ ಭಾಷಣ ಅವಿಸ್ಮರಣೀಯವಾಗಿದೆ ಎಂದು ಉಪನ್ಯಾಸಕ ಶಿವಾನಂದ ವಾಲಿಕಾರ ಹೇಳಿದರು.

ಪಟ್ಟಣದ ಜಿ.ಆರ್.ಗಾಂಧಿ ಕಲಾ, ವಾಯ್.ಎ.ಪಾಟೀಲ ವಾಣಿಜ್ಯ ಹಾಗೂ ಎಮ್.ಎಫ್.ದೋಶಿ ವಿಜ್ಞಾನ ಪದವಿ ಮಹಾವಿದ್ಯಾಲಯದಲ್ಲಿ ಎನ್.ಎಸ್.ಎಸ್, ಯುತ್ ರೆಡ್‌ಕ್ರಾಸ್ ಹಾಗೂ ಸ್ಕೌಟ್ಸ್ & ಗೈಡ್ಸ್ ಘಟಕಗಳ ಅಡಿಯಲ್ಲಿ ಸ್ವಾಮಿ ವಿವೇಕಾನಂದರ ಜಯಂತಿ ಪ್ರಯುಕ್ತ ರಾಷ್ಟ್ರೀಯ ಯುವ ದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿದರು.

ಪ್ರಾಂಶುಪಾಲ ಡಾ. ಎಸ್.ಬಿ.ಜಾಧವ, ಉಪನ್ಯಾಸಕ ಶ್ರೀ.ಬಿ.ಹೆಚ್.ಬಗಲಿ, ಸಹಾಯಕ ಪ್ರಾಧ್ಯಾಪಕರಾದ ಡಾ.ಶ್ರೀಕಾಂತ ರಾಠೋಡ, ಡಾ.ವಿಶ್ವಾಸ ಕೊರವಾರ, ಡಾ.ಸುರೇಂದ್ರ ಕೆ ಮಾತನಾಡಿದರು.

ಕಾರ್ಯಕ್ರಮದಲ್ಲಿ ಸಹಾಯಕ ಪ್ರಾಧ್ಯಾಪಕರಾದ ಡಾ.ಆನಂದ ನಡವಿನಮನಿ, ಶ್ರೀ.ಶ್ರೀಶೈಲ, ಡಾ.ಸಿ.ಎಸ್.ಬಿರಾದಾರ, ಡಾ.ಜಯಪ್ರಸಾದ ಡಿ ಶ್ರೀ.ಎಮ್.ಆರ್.ಕೋಣದೆ, ಶ್ರೀ.ಆರ್.ಪಿ.ಇಂಗನಾಳ ಮತ್ತಿತರಿದ್ದರು.

# ಸ್ವಾಮಿ ವಿವೇಕಾನಂದರು ವಿಶ್ವದ ಆಧ್ಯಾತ್ಮಿಕ ಗುರು

ಉದಯರಶ್ಮಿ ನ್ಯೂಸ್



ತಿಕೋಟಾ: ಸ್ವಾಮಿ ವಿವೇಕಾನಂದರು ಭಾರತಕ್ಕೆ ಮಾತ್ರವಲ್ಲದೇ ಪ್ರಪಂಚದ ಇತರೆ ದೇಶಗಳಿಗೂ ಸಹ ಅವರ ತತ್ವಗಳು, ಬದುಕಿದ ಹಾದಿ, ಯುವ ಜನತೆಗೆ ನೀಡಿದ ಸ್ಫೂರ್ತಿಯ ಕರೆಗಳಿಂದ ಅವರು ಇಂದಿಗೂ ಎಂದೆಂದಿಗೂ ಪ್ರಪಂಚದ ಆಧ್ಯಾತ್ಮಿಕ ಗುರು ಎಂದು ಹಿರಿಯ ಉಪನ್ಯಾಸಕ ಎಸ್ ಜಿ ಲಕ್ಕುಂಡಿಮಠ ಹೇಳಿದರು.

ತಿಕೋಟಾ ತಾಲ್ಲೂಕಿನ ಹೊನವಾಡ ಗ್ರಾಮದ ವಿ ವಿ ಎಸ್ ಕಾಲೇಜ್ (ಹೈಸ್ಕೂಲ್)ನಲ್ಲಿ ಶುಕ್ರವಾರ ಸ್ವಾಮಿ ವಿವೇಕಾನಂದರ 161ನೇ ಜಯಂತಿ ಆಚರಣೆಯಲ್ಲಿ ಅವರು ಮಾತನಾಡಿದರು.

ವಿವೇಕಾನಂದರ ಕೊನೆಯ ಮೂರು ಭವಿಷ್ಯವಾಣಿಗಳಲ್ಲಿ ಎರಡು ನಿಜವಾಗಿದ್ದು, ಕೊನೆಯ ಭವಿಷ್ಯವಾಣಿಯಾದ ಭಾರತ ವಿಶ್ವಗುರು ಆಗುವಲ್ಲಿ ದೇಶದ ಪ್ರತಿಯೊಬ್ಬರೂ ಶ್ರಮಿಸುವ ಸಂಕಲ್ಪ ಮಾಡಬೇಕೆಂದು ಆರ್ ಜಿ ಹಾಜೀವಗೋಳ ಹೇಳಿದರು.

ಭಾರತದಲ್ಲಿ ಸ್ವಾಮಿ ವಿವೇಕಾನಂದ ಜಯಂತಿ ಎಂದೂ ಕರೆಯಲ್ಪಡುವ ರಾಷ್ಟ್ರೀಯ ಯುವ ದಿನವು ದೇಶದ ಯುವ ಜನತೆಯ ಚೈತನ್ಯ, ಸಾಮರ್ಥ್ಯ ಮತ್ತು ಆಕಾಂಕ್ಷೆಗಳೊಂದಿಗೆ ಪ್ರತಿಧ್ವನಿಸುವ ಆಚರಣೆಯಾಗಿದೆ. ಸಮಾಜಕ್ಕೆ ಸಕಾರಾತ್ಮಕವಾಗಿ ಕೊಡುಗೆ ನೀಡಲು, ಏಕತೆಯನ್ನು ಬೆಳೆಸಲು ಮತ್ತು ಸ್ವಾಮಿ ವಿವೇಕಾನಂದರು ಪ್ರತಿಪಾದಿಸಿದ ಮೌಲ್ಯಗಳನ್ನು ಎತ್ತಿಹಿಡಿಯಲು ಪ್ರತಿ ಯುವ ಮನಸ್ಸಿನಲ್ಲಿರುವ ಸಾಮರ್ಥ್ಯವನ್ನು ಈ ದಿನವು ನೆನಪಿಸುತ್ತದೆ ಎಂದು ಪ್ರಾಚಾರ್ಯ ಎಂ ಎ ಹಿರೇಮಠ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಕಾರ್ಯಕ್ರಮದಲ್ಲಿ ಸಹ ಶಿಕ್ಷಕರಾದ ಎಂ ಜಿ ಕುಲಕರ್ಣಿ, ಶ್ರೀಮತಿ ಮಮತಾ ಹಿರೇಮಠ್, ಆರ್ ಬಿ ಶೇಡ್ಯಾಳ, ಎಸ್ ಎ ವಾಲಿಕಾರ, ನವೀನ್ ಹಿರೇಮಠ್, ಧರೆಪ್ಪ ಸಿದ್ನಾಥ, ನಿವೇದಿತಾ ಹಿರೇಮಠ ಹಾಗೂ ಸಿಬ್ಬಂದಿ ಇದ್ದರು.

# ಕಲಕೇರಿ: ರಾಷ್ಟ್ರೀಯ ಯುವ ದಿನಾಚರಣೆ

ಉದಯರಶ್ಮಿ ನ್ಯೂಸ್




ಕಲಕೇರಿ: ಸಿಡಿಲ ಮರಿ, ವೀರ ಸನ್ಯಾಸಿ, ಸಂತ ಶ್ರೇಷ್ಠರಾದ ಸ್ವಾಮಿ ವಿವೇಕಾನಂದರ ತತ್ವಾದರ್ಶಗಳನ್ನು ಇಂದಿನ ಯುವಕರು ಮೈಗೂಡಿಸಿಕೊಂಡು ಸಮರ್ಥ ಜೀವನ ಕಟ್ಟಿಕೊಳ್ಳುವುದರ ಜೊತೆಗೆ ಸುಭದ್ರ ರಾಷ್ಟ್ರ ನಿರ್ಮಾಣ ತಮ್ಮ ಗುರಿಯಾಗಿಸಿಕೊಳ್ಳಬೇಕೆಂದು ಪ್ರಾಚಾರ್ಯ ಎಸ್ ಎಮ್ ಸಜ್ಜನ ಹೇಳಿದರು.

ಗ್ರಾಮದ ಆದರ್ಶ ಪ್ರಥಮ ದರ್ಜೆ ಕಲಾ ಮತ್ತು ವಿಜ್ಞಾನ ಮಹಾವಿದ್ಯಾಲಯದಲ್ಲಿ ಸ್ವಾಮಿ ವಿವೇಕಾನಂದರ ಜಯಂತ್ಯೋತ್ಸವದ ಪ್ರಯುಕ್ತ ವಿದ್ಯಾರ್ಥಿ ಕಲ್ಯಾಣ ಘಟಕದ ಅಡಿಯಲ್ಲಿ ಹಮ್ಮಿಕೊಂಡ ರಾಷ್ಟ್ರೀಯ ಯುವ ದಿನಾಚರಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಇಂದಿನ ಯುವಕರು ಶಿಕ್ಷಣದ ಜೊತೆಗೆ ಸ್ವಾಮಿ ವಿವೇಕಾನಂದರ ಆದರ್ಶ ಮತ್ತು ಉದಾತ್ತವಾದ ವಿಚಾರಧಾರೆಗಳನ್ನು ಅವಲೋಕಿಸಿ ವೈಚಾರಿಕತೆ ಮತ್ತು ವೈಜ್ಞಾನಿಕ ದೃಷ್ಟಿಕೋನದ ಸಮಾಜ ನಿರ್ಮಿಸಲು ಮುಂದಾಗಬೇಕಿದೆ ಎಂದು ಹೇಳಿದರು.

ಈ ವೇಳೆ ಉಪನ್ಯಾಸಕರಾದ ಪ್ರವೀಣ ಪಾಕಿ, ಯುವಪ್ರತಿನಿಧಿ ಕುಮಾರಿ ವಿದ್ಯಾಶ್ರೀ ಬಿರಾದಾರ ಮಾತನಾಡಿದರು. ಮುಖ್ಯ ಅತಿಥಿಗಳಾಗಿ ಪ್ರೊ.ಆಬಿದಅಲಿ ಸಾಲೋಡಗಿ, ವಿದ್ಯಾರ್ಥಿ ಕಲ್ಯಾಣ ಘಟಕದ ಸಂಯೋಜಕರಾದ ಪ್ರೊ.ಶ್ರೀದೇವಿ ಹೂಲಿ, ಪ್ರೊ.ರುಕ್ಸಾನಾಬೇಗಂ ಬೇಪಾರಿ, ಪ್ರೊ.ಮಲ್ಲಿಕಾರ್ಜುನ ಸಜ್ಜನ, ಪ್ರೊ.ಸಂಗೀತಾ ಟೆಂಗಳಿ, ಪ್ರೊ.ಝುರೀನಾ ಕುಕನೂರ, ಪ್ರೊ.ಮಹಾಂತೇಶ ಲಂಗೋಟಿ, ಪ್ರೊ.ಹುಸೇನಬಾಶಾ ಹಿಪ್ಪರಗಿ, ಪ್ರೊ.ಸವಿತಾ ಇಂಗಳೇಶ್ವರ, ಪ್ರೊ.ಜಾವೀದ ಜರ್ದಿ ಸೇರಿದಂತೆ ಇತರರು ಇದ್ದರು.

# ರೋಗಮುಕ್ತ ಗ್ರಾಮ: ಗ್ರಾಮಸ್ಥರ ಸಹಕಾರ ಅಗತ್ಯ

**ಉದಯರಶ್ಮಿ ನ್ಯೂಸ್**



ಮೋರಟಗಿ: ಸಾರ್ವಜನಿಕರು ಆನೇಕಾಲು ಮಾತ್ರೆ ತಿರಸ್ಕರಿಸುವುದರಿಂದ ಸಿಂದಗಿ ಹಾಗೂ ಆಲಮೇಲ ತಾಲೂಕಿನಲ್ಲೇ ಮೋರಟಗಿ ಸಮುದಾಯ ಆರೋಗ್ಯ ಕೇಂದ್ರದ ಹಳ್ಳಿಗಳಲ್ಲಿ ಆನೇಕಾಲು ರೋಗದ ಲಕ್ಷಣಗಳು ಹೆಚ್ಚಾಗಿ ಕಾಣುತ್ತಿವೆ. ರೋಗ ಮುಕ್ತ ಗ್ರಾಮ ನಿರ್ಮಾಣಕ್ಕಾಗಿ ಸಾರ್ವಜನಿಕರು ಸಹಕಾರ ನೀಡಬೇಕು ಎಂದು ಸಮುದಾಯ ಅರೋಗ್ಯ ಕೇಂದ್ರದ ಮುಖ್ಯ ವೈದ್ಯಾಧಿಕಾರಿ ಡಾ, ಶಶಿಕಾಂತ ಬಾಗೇವಾಡಿ ಹೇಳಿದರು.

ಸಮುದಾಯ ಅರೋಗ್ಯ ಕೇಂದ್ರದಲ್ಲಿ ಆನೆಕಾಲು ರೋಗ ಮುಕ್ತಕ್ಕಾಗಿ ಕರೆದ ಸಾಮೂಹಿಕ ಔಷದಿ ಸೇವನೆ ಜಾಗೃತಿ ಕಾರ್ಯಕ್ರಮದ ಸಭೆಯಲ್ಲಿ ಸಭೆಯಲ್ಲಿ ಅವರು ಮಾತನಾಡಿದರು.

ಆನೇಕಾಲು ರೋಗ ಇದೊಂದು ಸೋಂಕಿತ ಕ್ಯೂಲೆಕ್ಸ್ ಸೊಳ್ಳೆಗಳ ಕಚ್ಚುವಿಕೆಯಿಂದ ಸಾಂಕ್ರಾಮಿಕವಾಗಿ ಹರಡುವ ರೋಗವಾಗಿದೆ, ಆ ಸೊಳ್ಳೆಯಿಂದ ಕಚ್ಚಿದರೆ ಒಬ್ಬರಿಂದ ಒಬ್ಬರಿಗೆ ರೋಗ ಅಂಟಿಕೊಳ್ಳುವ ಎಲ್ಲ ಸಾಧ್ಯತೆಗಳು ಇರುತ್ತದೆ ಸಾರ್ವಜನಿಕರು ಮುಂಜಾಗ್ರತವಾಗಿ ಮಾತ್ರೆ ತೆಗೆದುಕೊಂಡರೆ ಮಾತ್ರ ರೋಗ ಅಂಟಿಕೊಳ್ಳುವುದಿಲ್ಲ, ಮಾತ್ರೆ ತಿರಸ್ಕರಿಸಿದರೆ ಸೊಂಕಿತನಿಗೆ ಕಚ್ಚಿದ ಸೊಳ್ಳೆ ಸಾಮಾನ್ಯ ಇನ್ನೊಬ್ಬ–ರಿಗೆ ಕಚ್ಚುವುದರಿಂದ ಆನೆಕಾಲು ರೋಗ ಉತ್ಪತ್ತಿ ಆಗುತ್ತದೆ. ಇದನ್ನು ತಡೆಗಟ್ಟುಲು ಸರಕಾರ ನಿಮ್ಮ ಮನೆ ಬಾಗಿಲಿಗೆ ಅರೋಗ್ಯ ಸಿಬ್ಬಂದಿ ಆಶಾ ಕಾರ್ಯಕರ್ತರು ಮಾತ್ರೆ ಕೊಡಲು ಬರುತ್ತಾರೆ. ಆನೇಕಾಲು ರೋಗದಂತೆ ವಿವಿಧ ರೀತಿಯ ರೋಗಗಳನ್ನು ನಿಯಂತ್ರಿಸಲು ಸರಕಾರ ಉಚಿತ ಮಾತ್ರೆಗಳು ನೀಡುತ್ತಿದೆ. ಸರಕಾರದ ಉಚಿತ ಅರೋಗ್ಯ ಯೋಜನೆಗಳ ಲಾಭ ಪಡೆದುಕೊಳ್ಳಬೇಕು. ವಿಶೇಷವಾಗಿ ಗ್ರಾಮ ಪಂಚಾಯಿತಿ ಅಧ್ಯಕ್ಷರು ಮತ್ತು ಅಭಿವೃದ್ಧಿ ಅಧಿಕಾರಿಗಳು ಜವಾಬ್ದಾರಿ ವಹಿಸಿ ಪ್ರತಿಯೊಂದು ವಾರ್ಡಗಳಲ್ಲಿ ಡಂಗುರ ಸಾರಿಸುವ ಮೂಲಕ ಜಾಗೃತಿ ಮೂಡಿಸ್ಬೇಕು ಎಂದು ಮನವಿ ಮಾಡಿದರು.

ನಂತರ ತಾಲೂಕ ಅರೋಗ್ಯ ಶಿಕ್ಷಣ ಅಧಿಕಾರಿ ಹರಿ ಕುಲಕರ್ಣಿ ಹಾಗೂ ಎನ್.ವ್ಹಿ.ಬಿ. ಡಿ. ಸಿ. ಪಿ. ಪ್ರಭು ಜಂಗಿನ್ಮಠ ಮಾತನಾಡಿ, ಮನೆಯ ಅಕ್ಕಪಕ್ಕದಲ್ಲಿ ಸ್ವಚ್ಚತೆ ಕಾಪಾಡಬೇಕು, ಚರಂಡಿಗಳಲ್ಲಿ ನೀರು ನಿಲ್ಲದಂತೆ ನಿಗಾ ವಹಿಸಬೇಕು, ಮನೆಯ ಒಳಗಡೆ ಸೊಳ್ಳೆಗಳು ಬರದಂತೆ ಜಾಲರಿ ಅಳವಡಿಸಬೇಕು. ಪ್ರಸೂತಿ ಹಾಗೂ ವೃದ್ಧರ ಹೊರತುಪಡಿಸಿ ಎಲ್ಲರೂ ವರ್ಷಕೊಮ್ಮೆ ಸರಕಾರ ನೀಡುವ ಮಾತ್ರೆ ಸೇವಿಸಬೇಕು. ಒಂದು ಕುಟುಂಬದಲ್ಲಿದ್ದ ಎಲ್ಲ ಸದಸ್ಯರು ಮಾತ್ರೆ ಸೇವಿಸಬೇಕು. ಈ ಕುರಿತು ಸಾಕಷ್ಟು ಸಲ ಜಾಗ್ರತಿ ಮೂಡಿಸಿದರೂ ಸಾರ್ವಜನಿಕರು ಮಾತ್ರೆ ತೆಗೆದುಕೊಂಡ ಕೆಲವೇ ಕ್ಷಣಗಳಲ್ಲಿ ಹೊರಗಡೆ ಬಿಸಾಕುತ್ತಾರೆ. ಇದನ್ನು ಕಂಡು ನಮ್ಮ ಆಶಾ ಕಾರ್ಯಕರ್ತರು ಹಾಗೂ ಅರೋಗ್ಯ ಸಿಬ್ಬಂದಿಗಳು ಜಾಗ್ರತಿ ಮೂಡಿಸಿದರೂ ಪ್ರಯೋಜನೆ ಆಗಿಲ್ಲ. ಮೊನ್ನೆಯ ದಿನ ಮೋರಟಗಿ ಗ್ರಾಮದಲ್ಲಿ ರಾತ್ರಿವೇಳೆ ಮೂರು ನೂರುಕಿಂತಲೂ ಅಧಿಕ ಜನರ ರಕ್ತ ಪರಿಶೀಲಿಸಿದಾಗ ಆರು ಜನರಲ್ಲಿ ಆನೇಕಾಲು ರೋಗ ಕಂಡು ಬಂದಿದೆ ಇದನ್ನು ತಡೆಗಟ್ಟಲು ಗ್ರಾಮ ಪಂಚಾಯತಿಯ ಸಹಕಾರ ಮುಖ್ಯವಾಗಿರುತ್ತದೆ ಎಂದರು.

ಕಾರ್ಯಕ್ರಮದಲ್ಲಿ ಗ್ರಾ. ಪಂ. ಉಪಾಧ್ಯಕ್ಷರ ಪ್ರತಿನಿಧಿ ಇಸುಫ್ ಮುಲ್ಲಾ, ವೈದ್ಯಾಧಿಕಾರಿಗಳಾದ ಡಾಕ್ಟರ್ ಶಶಿಕಾಂತ್ ಬಾಗೇವಾಡಿ, ಡಾಕ್ಟರ್ ಗಿರೀಶ್ ಪಾಟೀಲ್, ಡಾಕ್ಟರ್ ಮಂಜುನಾಥ್ ಎಂ ಆರ್ ಮಷೀನ್ ಫಾರೂಕ್ ವಲ್ಲಿಭಾಯಿ, ಮೈನುದ್ದೀನ್ ಮಣಿಯಾರ್, ಗ್ರಾ.ಪಂ. ಸದಸ್ಯರಾದ ಶ್ರೀಮಂತ ಮಳಗಿ, ಸಂತೋಷ ಮದರಿ, ನೂರಮಹಮದ ಕಣ್ಣಿ, ಶ್ರೀ ಸಿದ್ದರಾಮೇಶ್ವರ ಶಾಲೆಯ ಮುಖ್ಯೋಪಾಧ್ಯಾಯ ಆರ್, ಎಸ್ ಬಿರಾದಾರ, ಸದ್ಭಾವನಾ ಶಾಲೆಯ ಮುಖ್ಯಗುರು ಮುರಗೇಂದ್ರ ಕೋರಿ, ಜ್ಞಾನಜ್ಯೋತಿ ಶಾಲೆಯ ಮುಖ್ಯಗುರು ಎಂ. ಜಿ. ಹರಾವಾಳ, ಫಾರೂಕ್ ವಲ್ಲಿಭಾಯಿ, ಸೇರಿದಂತೆ ಅರೋಗ್ಯ ಕೇಂದ್ರ ಸಿಬ್ಬಂದಿ ಆಶಾ ಕಾರ್ಯಕರ್ತರು ಇದ್ದರು.

## ಸ್ವಾಮಿ ವಿವೇಕಾನಂದರ 161ನೇ ಜನ್ಮ ದಿನಾಚರಣೆ



**ಉದಯರಶ್ಮಿ ನ್ಯೂಸ್**

ಮುದ್ದೇಬಿಹಾಳ: ತಾಲ್ಲೂಕಿನ ಢವಳಗಿ ಗ್ರಾಮದ ಬಸವ ಬಾಲ ಭಾರತಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಸ್ವಾಮಿ ವಿವೇಕಾನಂದರ 161 ನೇ ಜನ್ಮ ದಿನಾಚರಣೆ ಮತ್ತು ರಾಷ್ಟ್ರೀಯ ಯುವ ದಿನವನ್ನು ಆಚ–ರಿಸಲಾಯಿತು.ಇದೇ ವೇಳೆಯಲ್ಲಿ ಶಾಲೆಯ ಮುಖ್ಯ ಗುರುಗಳಾದ ರಮೇಶ ಮೂಲಿಮನಿ, ಜೆ ಎಸ್ ಪಾಟೀಲ, ಬಿ ಎಸ್ ಪಾಟೀಲ, ಎಸ್ ಬಿ ಬಿರಾದಾರ, ಎಸ್ ಎಸ್ ಅವಟಿ,ಹರಿನಾಥ ಎನ್ ಹಾಗೂ ಅತಿಥಿ ಶಿಕ್ಷಕರಾದ ಪರಶುರಾಮ ಮೂಲಿಮನಿ, ಹಾಗೂ ಬಿಬಿ ಫಾತಿಮಾ ಸೇರಿದಂತೆ ಶಾಲೆಯ ವಿದ್ಯಾರ್ಥಿಗಳು ಇದ್ದರು.

# ಆಲಮೇಲ ಪಟ್ಟಣದಾದ್ಯಂತ ಚರಗ ಚೆಲ್ಲುವ ಸಂಭ್ರಮ

**ಉದಯರಶ್ಮಿ ನ್ಯೂಸ್**



ಆಲಮೇಲ: ಪಟ್ಟಣದಲ್ಲಿ ಸಾಂಪ್ರದಾಯಿಕವಾಗಿ ಹಿಂದಿನಿಂದ'ಲೂ ನಡೆದುಕೊಂಡು ಬಂದ ಸಂಪ್ರದಾಯದಂತೆ ಎಳ್ಳ ಅಮಾವಾಸ್ಯೆ ಚರಗ ಚಲ್ಲುವ ಹಬ್ಬವನ್ನು ಸಡಗರದಿಂದ ಪಟ್ಟಣ ಸೇರಿದಂತೆ ತಾಲ್ಲೂಕಿನಾದ್ಯಂತ ಸಂಭ್ರಮದಿಂದ ಗುರುವಾರ ಆಚರಿಸಲಾಯಿತು.

ರೈತರು ತಾವು ನಂಬಿರುವ ಮಣ್ಣನ್ನು ದೈವಭಾವದಿಂದ ಪೂಜಿಸುವ ಆಚರಣೆ ಇದಾಗಿದೆ. ಶ್ರಮಕ್ಕೆ ತಕ್ಕಂತೆ ಉತ್ತಮ ಫಸಲನ್ನು ಕೊಡುವ ಭೂಮಿ ತಾಯಿಯನ್ನು ಪೂಜಿಸಿ, ಹೊಲದ ತುಂಬೆಲ್ಲಾ ಚೀಲಗಳು ತುಂಬಿ ಹೊರಗೆ ಚೆಲ್ಲುವಷ್ಟು ಬೆಳೆ ನೀಡಲಿ ಎಂದು ಗ್ರಾಮೀಣ ಭಾಗಗಳಲ್ಲಿ ಆಚರಿಸುವ ಹಬ್ಬವೇ ಚರಗ ಚೆಲ್ಲುವ ಹಬ್ಬವಾಗಿದೆ.

ಮಾರ್ಗಶಿರ ಮಾಸದಲ್ಲಿ ಬರುವ ಎಳ್ಳು ಅಮಾವಾಸ್ಯೆ ಅಪ್ಪಟ ರೈತರ ಹಬ್ಬ. ಹೊಲಗಳಲ್ಲಿ ಬೆಳೆದು ನಿಂತಿ–ರುವ ಹಿಂಗಾರು ಪೈರುಗಳ ನಡುವೆ ಬನ್ನಿಕಂಟಿಗೆ ಸೀರೆ ಉಡಿಸಿ, ಐದು ಕಲ್ಲುಗಳನ್ನು ಇಟ್ಟು ಭೂ ತಾಯಿಗೆ ವಿಶೇಷ ಪೂಜೆ ಸಲ್ಲಿಸಲಾಗುತ್ತದೆ.

ಚರಗ ಚಲ್ಲುವ ಹಬ್ಬದ ವಿಶೇಷತೆ.

ಅಮವಾಸ್ಯೆಯ ಮೂರ್ನಾಲ್ಕು ದಿನ ಮುಂಚಿತವಾಗಿ ರೈತರ ಮನೆಗಳಲ್ಲಿ ಹಬ್ಬದ ತಯಾರಿ ನಡೆಯುತ್ತದೆ. ಹಬ್ಬದ ವಿಶೇಷವಾಗಿ ಕಡಬ, ಸಜ್ಜೆ ರೊಟ್ಟಿ,ಜೋಳದ ರೊಟ್ಟಿ, ನಾನಾ ಬಗೆಯ ಚಟ್ನಿ, ಕಾಳು, ಎಣ್ಣೆಗಾಯಿ, ಎಳ್ಳು ಮತ್ತು ಶೇಂಗಾದ ಹೋಳಿಗೆ ತಯಾರಿಸಲಾಗುತ್ತದೆ.

ಅಮಾವಾಸ್ಯೆ ದಿನ ಬೆಳಗ್ಗೆ ಎದ್ದ ರೈತರು ಮೊದಲು ಎಲ್ಲವನ್ನು ಸಿದ್ದಪಡಿಸಿಕೊಂಡು. ನಂತರ ಮನೆಯಲ್ಲಿ ಮಾಡಿದ್ದ ಬಗೆ ಬಗೆಯ ಆಹಾರ ಪದಾರ್ಥಗಳನ್ನು ದೊಡ್ಡ ಬುತ್ತಿಯಲ್ಲಿ ಕಟ್ಟಿಕೊಂಡು, ಕುಟುಂಬದವರೆಲ್ಲರು ಅವರ ಆಪ್ತರು ಸೇರಿ ಹೊಲಕ್ಕೆ ಹೋಗುವುದು ದೊಡ್ಡ ಸಡಗರದಂತೆ ಕಾಣುತ್ತದೆ.

ಜತೆಗೆ ತಮ್ಮ ಸಂಬಂಧಿಗಳು, ಊರಿನ ಇತರರು, ಹಿತೈಷಿಗಳನ್ನು ಹೊಲಕ್ಕೆ ಕರೆದೊಯ್ದು, ಚರಗ ಚೆಲ್ಲಿದ ನಂತರ ಹೊಲದಲ್ಲೇ ಸಾಮೂಹಿಕ ಊಟ ಸವಿದು ಆತ್ಮೀಯತೆ ಮೆರೆಯುತ್ತಾರೆ.

ಆಲಮೇಲ ಪಟ್ಟಣ ಪಂಚಾಯತ ಸದಸ್ಯ ಚಂದ್ರಶೇಖರ ಹಳೇಮನಿಯವರ ಹೊಲದಲ್ಲಿ ಎಳ್ಳ ಅಮಾವಾಸ್ಯೆ ನಿಮಿತ್ತ ಸಾಮೂಹಿಕ ಬೋಜನದಲ್ಲಿ ಸುನೀಲ ಉಪ್ಪಿನ, ಸಂಜೀವಕುಮಾರ ಗುಂದಗಿ, ಮಲ್ಲು ಅಚಲೇರಿ, ಗನಿ ದೇವರಮನಿ, ಪ್ರಕಾಶ ಉಪ್ಪಿನ, ಸಿದ್ಧರಾಮ್ ಬಿರಾದಾರ, ಅಯೂಬ್ ಸುಂಬಡ, ದಯಾನಂದ ನಾರಾಯಣಕರ, ಮಹಾಂತೇಶ ಹಳೇಮನಿ ಸೇರಿದಂತೆ ಮತ್ತಿತರರು ಪಾಲ್ಗೊಂಡಿದ್ದರು.

# ಶಾಲೆಗಳ ಅಭಿವೃದ್ಧಿಗೆ ನರೇಗಾ ಸಹಕಾರಿ :ಮಸಳಿ



**ಉದಯರಶ್ಮಿ ನ್ಯೂಸ್**

ವಿಜಯಪುರ: ತಾಲ್ಲೂಕಿನ ನಾಗಠಾಣ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಹುಣಶ್ಯಾಳ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಡಿ ನಿರ್ಮಿಸಿದ "ಅಡುಗೆ ಕೋಣೆ"ಯನ್ನು ಶುಕ್ರವಾರ ವಿಜಯಪುರ ತಾಲೂಕಾ ಪಂಚಾಯತ್ ಸಹಾಯಕ ನಿರ್ದೇಶಕರಾದ ಕಾಸಿಂಮಸಾಬ ಮಸಳಿ ಉದ್ಘಾಟಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಅವರು, ಮಹಾತ್ಮ ಗಾಂಧಿ ನರೇಗಾ ಯೋಜನೆಯು ಗ್ರಾಮೀಣ ಜನ–ರಿಗೆ 316 ರೂ ಕೂಲಿ ಜೊತೆಗೆ 100 ದಿನಗಳ ಉದ್ಯೋಗ ಖಾತರಿ ನೀಡುವವರ ಜೊತೆಗೆ ಸರಕಾರಿ ಶಾಲೆಗಳ ಅಭಿವೃದ್ಧಿಗೆ ಸಹ ನೆರವು ನೀಡುತ್ತಿದೆ. ಸರಕಾರಿ ಪ್ರಾರ್ಥಮಿಕ & ಪ್ರೌಢಶಾಲೆಗಳಲ್ಲು ಶಾಲಾ ಆಟದ ಮೈದಾನ, ಶೌಚಾಲಯ, ಕಂಪೌಂಡ ಗೋಡೆ, ಅಡುಗೆ ಕೋಣೆಯಂತಹ ಹಲವಾರು ಕಾಮಗಾರಿಗಳನ್ನು ಕೈಗೊಳ್ಳಬಹುದಾಗಿದೆ. ಗ್ರಾಮ ಪಂಚಾಯತಿ ಅಧಿಕಾರಿಗಳು, ಸದಸ್ಯರುಗಳು ಮತ್ತು ಶಾಲಾ ಶಿಕ್ಷಕರು ಸಮನ್ವಯತೆಯಿಂದ ಈ ಮೇಲಿನ ಕಾಮಗಾರಿಗಳನ್ನು ಪಡೆದುಕೊಂಡು ಶಾಲೆಗಳ ಅಭಿವೃದ್ಧಿಗೆ ಶ್ರಮಿಸಬೇಕು ಎಂದು ಹೇಳಿದರು.

ಗ್ರಾಮ ಪಂಚಾಯಿತಿಯ ಉಪಾಧ್ಯಕ್ಷರಾದ ಬಸಪ್ಪ ಹಳ್ಳಿ, ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಬಿ.ಆರ್.ರಾಠೋಡ್, ತಾಲೂಕು ತಾಂತ್ರಿಕ ಸಂಯೋಜಕ ಪರಶುರಾಮ ಶಹಾಪುರ, ಐಇಸಿ ಸಂಯೋಜಕ ರಾಘವೇಂದ್ರ ಭಜಂತ್ರಿ ಸೇರಿದಂತೆ ಗ್ರಾಮ ಪಂಚಾಯಿತಿ ಸಿಬ್ಬಂದಿಗಳು ಉಪಸ್ಥಿತರಿದ್ದರು.

## ನಗರ ಆಶ್ರಯ ಸಮಿತಿಗೆ ಸದಸ್ಯರ ನೇಮಕ

**ಉದಯರಶ್ಮಿ ನ್ಯೂಸ್**

ವಿಜಯಪುರ: ನಗರ ಶಾಸಕರಾದ ಬಸನಗೌಡ ರಾ.ಪಾಟೀಲ ಯತ್ನಾಳ ಅವರ ಪ್ರಸ್ತಾವನೆಯಂತೆ, ವಿಜಯಪುರ ಮಹಾನಗರ ಪಾಲಿಕೆಯ ನಗರ ಆಶ್ರಯ ಸಮಿತಿಗೆ ಅಧಿಕಾರೇತರ ಸದಸ್ಯರನ್ನಾಗಿ ನಾಮನಿರ್ದೇಶನ ಮಾಡಿ ಸರ್ಕಾರ ಆದೇಶ ಹೊರಡಿಸಿದೆ.

ವಿಜಯಪುರ ನಗರ ಮತಕ್ಷೇತ್ರ ವ್ಯಾಪ್ತಿಯ ಲಕ್ಷ್ಮೀ ಭಾಗಪ್ಪ ಕನ್ನೊಳ್ಳಿ (ಸಾಮಾನ್ಯ ವರ್ಗ ಮಹಿಳೆ), ಬಸವರಾಜ ಮಾರುತಿ ಕಾಂಬಳೆ (ಪರಿಶಿಷ್ಟ ಜಾತಿ), ಸಂದೀಪ ನರಸಿಂಗ್ ಕಾಳೆ (ಹಿಂದುಳಿದ ವರ್ಗ), ಪಾರೀಸ್ ಶಿರಹಟ್ಟಿ (ಅಲ್ಪಸಂಖ್ಯಾತರ ವರ್ಗ) ಅವರನ್ನು ನೇಮಕ ಮಾಡಲಾಗಿದೆ.

## "ಕುಡಿನೋಟ"

ಚಿಗರೆ ಕಣ್ಣಿನ ಚೆಲುವು
ನೀನಿರಲು ಪ್ರೇಮಮಯವು
ಕೋಲ್ಮಿಂಚು ಕುಡಿನೋಟವು
ಸವಿಜೇನು ಅವಳೊಲವು


ಸೆಳೆವಾ ಚೆಲುವು ಒಲವು
ಚಿಮ್ಮಿತು ನನ್ನಲಿ ಪ್ರೀತಿಯ ಹರಿವು
ಮುಂಗುರುಳು ಮಳೆ ಮೋಡವು
ಬಂದಿಸಿದ್ದು ಕುಡಿನೋಟವು

ಕೋಗಿಲೆ ಸಂಗೀತ ನುಡಿಯಲಿ
ಲಜ್ಜೆಯೆ ಮೌನ ಬಾಷೆಯು
ಬಂದೆ ಕೈಹಿಡಿದು ಪ್ರೀತಿಯಲಿ
ಹೂವಾಯ್ತು ನಡೆವಾ ಹಾದಿಯು

**ಕಾವ್ಯರಶ್ಮಿ**

– ಮುನಿರಾಜ್
("ನಮ್ಮ ಕಥಾ ಅರಮನೆ" ಬರಹಗಾರರು)





## ಕಥೆ
# ಪುನರ್ವಿಮರ್ಶೆ

**ಭಾವರಶ್ಮಿ**



–ಗೀತಾ ಹೆಬ್ಬಾರ್
("ನಮ್ಮ ಕಥಾ ಅರಮನೆ" ಬರಹಗಾರರು)

**ಉದಯರಶ್ಮಿ ದಿನಪತ್ರಿಕೆ**

"ಅಮ್ಮಾ, ನನಗೆ ಆ ಮನೆಯಲ್ಲಿ ಇರೋದಿಕ್ಕೆ ಆಗೋದಿಲ್ಲಮ್ಮಾ. ಒಂದು ಪೈಸೆಗೂ ಗಂಡ ಆನಂದ್ ಹತ್ತಿರ ಕೈ ಚಾಚಬೇಕು.ಏನೇ ಖರ್ಚು ಮಾಡಿದರೂ ಎಲ್ಲವದಕ್ಕೂ ಲೆಕ್ಕ ಕೊಡಬೇಕು."

"ಅಮಾ, ಅತ್ತೆ ಒಂಥರಾ ಇರ್ತಾರೆ. ಎಲ್ಲವದಕ್ಕೂ ಸಿಡಿ ಸಿಡಿ ಅಂತಿರ್ತಾರೆ."

"ಅಮ್ಮಾ, ಆ ಮನೆಯಲ್ಲಿ ಯಾರೂ ನನಗೆ ಟೇಕ್ ಕೇರ್ ಮಾಡೋದೇ ಇಲ್ಲ. "

"ಅಮ್ಮಾ, ಎಲ್ಲ ಕೆಲಸ ನಾನೇ ಮಾಡಬೇಕು. ಯಾರೂ ನನಗೆ ಸಹಾಯ ಮಾಡೋದೇ ಇಲ್ಲ."

ಹೀಗೆ ಏನೇನೋ ಗಂಡನ ಮನೆಯವರ ಬಗ್ಗೆ ದೂರು ತೆಗೆದುಕೊಂಡು ವಾರಕ್ಕೊಮ್ಮೆ ತವರಿಗೆ ಬರುವ ಮಗಳು ದೀಪಾಳನ್ನು ನೋಡಿ ಸಹಿಸಲಾಗಲಿಲ್ಲ ಜಾನಕಿಗೆ.

"ಮಗಳೇ, ಇಲ್ಲಿ ಕುಳಿತುಕೋ. ನಾನು ಹಾಗೂ ನಿನ್ನ ಅಪ್ಪ ಸೇರಿ ನಿನ್ನನ್ನು ಮದುವೆಯಾಗಲಿರುವ ಹುಡುಗ, ಹುಡುಗನ ಮನೆಯವರು, ಅವರ ಆಸ್ತಿ, ಅಂತಸ್ತು ಎಲ್ಲ ನೋಡಿ ಸಾಕಷ್ಟು ಖರ್ಚು ಮಾಡಿ ಮದುವೆ ಮಾಡಿ ನಿನ್ನನ್ನು ಆ ಮನೆಗೆ ಸೇರಿಸಿದ್ದೇವೆ. ಇನ್ನು ಮೇಲೆ ನೀನಾಯಿತು, ನಿನ್ನ ಮನೆಯಾಯಿತು ಎಂದು ಇರಬೇಕು. ಏನೇ ಸಮಸ್ಯೆ ಬಂದರೂ ಪರಿಹ–ರಿಸಿಕೊಳ್ಳುವುದು ನಿನ್ನ ಕೈ ಯಲ್ಲಿ ಇದೆ. ಇದು ನಿನ್ನ ತವರು ಮನೆ ಅಷ್ಟೇ. ಆ ಮನೆ ನಿನ್ನದು. ನಿನ್ನ ಹಕ್ಕಿನ ಮನೆ. ಆ ಮನೆಯ ಮೇಲೆ ನಿನಗೆ ಸಂಪೂರ್ಣ ಹಕ್ಕಿದೆ."

"ಆ ಮನೆಯ ಎಲ್ಲವದಕ್ಕೂ ಅಂದರೆ ಸುಖ, ದುಃಖ, ಸಂತಸ, ನೋವು, ನಲಿವು ..ಎಲ್ಲವದಕ್ಕೂ ನೀನು ಹಕ್ಕುದಾರಳು. ಅದು ನಿನ್ನದೇ ಮನೆ. ಆ ಮನೆಯಲ್ಲಿರುವುದು ನಿನ್ನ ಹಕ್ಕು ಅಷ್ಟೇ.

ಒಂದಲ್ಲಾ ಒಂದು ಸಮಸ್ಯೆ ಹೇಳಿಕೊಂಡು ಪದೇ ಪದೇ ನಮ್ಮ ಮನೆಗೆ ಬರಬೇಡ. "

ನಿಷ್ಠುರವಾಗಿಯೇ ಆದರೂ ನೇರವಾಗಿಯೇ ಹೇಳಿದರು ಜಾನಕಮ್ಮ.

ಪೆಚ್ಚು ಮೊರೆ ಹಾಕಿಕೊಂಡು ತನ್ನ ಗಂಡನ ಮನೆಗೆ ಮರಳಿ ಹೋದಳು ದೀಪಾ.

ಮಗಳಿಗೆ ತಾನು ಹೇಳಬೇಕಾಗಿರುವುದನ್ನು ಹೇಳಿ ತನ್ನ ಪಾಡಿಗೆ ಕೆಲಸ ಮಾಡಿಕೊಂಡಿದ್ದರು ಜಾನಕಮ್ಮ. ಆದರೆ ದೀಪಾಳ ಅಪ್ಪ ಶಾಮಣ್ಣ ಮಾತ್ರ ಅನ್ಯಮನಸ್ಕರಾಗಿದ್ದರು. ತನ್ನ ಪತಿಯನ್ನೇ ಗಮನಿಸುತ್ತಿದ್ದ ಜಾನಕಮ್ಮ ನಗುತ್ತಾ ಪತಿಯ ಸನಿಹ ಬಂದರು.

"ರೀ, ನಿಮ್ಮ ಮನಸ್ಸಿನ ತಳಮಳ ನನಗೆ ಅರ್ಥವಾಗುತ್ತದೆ. ನಾನು ನಮ್ಮ ಮಗಳು ದೀಪಾಳ ಬಳಿ ಹಾಗೆ ಒರಟಾಗಿ ಮಾತನಾಡಬಾರದಿತ್ತು ಎಂದಲ್ಲವಾ ನಿಮ್ಮ ತೊಳಲಾಟಕ್ಕೆ ಕಾರಣ. ನನಗೂ ಹಾಗೆ ನೇರವಾಗಿ ಹೇಳುವಾಗ ಸಂಕಟವಾಯಿತು. ಆದರೆ ಹೇಗಾದರೂ ಮಾಡಿ ದೀಪಾಳ ಮನಸ್ಥಿತಿಯನ್ನು ನಾನು ಹದಗೊಳಿಸಬೇಕಿತ್ತು."

"ದೀಪಾಳ ಮದುವೆಯಾಗಿ ಹೆಚ್ಚು ಸಮಯ ಆಗಿಲ್ಲ ಅಲ್ಲವಾ?ಆಕೆಗೆ ಆ ಮನೆಗೆ ಹೊಂದಿಕೊಳ್ಳಲು ಸ್ವಲ್ಪ ಸಮಯ ಬೇಕು. ಯಾರಿಗೇ ಆಗಲಿ, ಒಬ್ಬರ ಮೇಲೆ ಮನಸ್ಸು ಹೊಂದಿಕೊಳ್ಳದಿದ್ದಾಗ ಅವರು ಮಾಡುವುದೆಲ್ಲ ತಪ್ಪು ಎನ್ನುವ ಭಾವನೆ ಬೆಳೆದು ಬಿಡುತ್ತದೆ. ನಮ್ಮ ದೀಪಾಳ ಪರಿಸ್ಥಿತಿಯೂ ಹಾಗೇ ಆಗಿದೆ. ಆಕೆ ಅರ್ಥಮಾಡಿಕೊಂಡು ಆ ಮನೆಯಲ್ಲಿ ಚೆನ್ನಾಗಿ ಬಾಳುತ್ತಾಳೆ ಎನ್ನುವ ನಂಬಿಕೆ ನನಗಿದೆ. "

"ಅಲ್ವೇ ಜಾನು! ಅವಳು ಮಾತನಾಡುತ್ತಿರುವಾಗ ತನ್ನ ಸಮಸ್ಯೆಗಳನ್ನು ಹೇಳಿಕೊಳುತ್ತಿರುವಾಗ ' ಮಗಳೇ, ಈ ಮನೆಗೇ ಬಂದು ಬಿಡು' ಎಂದು ಬಾಯಿಬಿಟ್ಟು ಹೇಳಿ ಬಿಡಲಾ ಎಂದು ಅನಿಸಿಬಿಟ್ಟಿತ್ತು. ಆದರೆ ನೀನು ಹಾಗೇ ನಿಷ್ಠುರವಾಗಿ ನುಡಿದಾಗ ನನ್ನ ಬಾಯಿ ಕಟ್ಟಿ ಹೋಯಿತು. "

ಶಾಮಣ್ಣ ಮನದ ಮಾತನ್ನು ಪತ್ನಿಯ ಬಳಿ ಹೇಳಿದರು.

"ರೀ,ನನಗೂ ಅಷ್ಟೇ. ಹಾಗೇ ಹೇಳುವಾಗ ತುಂಬಾ ಸಂಕಟವಾಯಿತು. ನೀವೊಂದು ವಿಷಯವನ್ನು ಇಲ್ಲಿ ಗಮನಿಸಬೇಕು. ಈಗೇನೋ ನಾವಿಬ್ಬರು ಇದ್ದೇವೆ. ನಮಗೂ ವಯಸ್ಸಾಗುತ್ತದೆ. ನಾವೂ ಪರಾವಲಂಬಿಗಳಾಗಬಹುದು. ನಮ್ಮ ಮಗನಿಗೆ ಮದುವೆಯಾಗಿ ಸೊಸೆ ಮನೆಗೆ ಬರುತ್ತಾಳೆ. ಆ ಸಮಯದಲ್ಲಿ ನಮ್ಮ ದೀಪಾ ಇದೇ ಮನೆಯಲ್ಲಿ ಇದ್ದರೆ, ಆಕೆ ನೆಮ್ಮದಿ, ಸಂತಸದಿಂದ ಇರಲು ಸಾಧ್ಯವಾ?"

"ಆಕೆಯದು ದಾಕ್ಷಿಣ್ಯದ ಬದುಕಾಗುತ್ತದೆ. ಅಂತಹ ದಾಕ್ಷಿಣ್ಯದ, ಹಂಗಿನ ಬದುಕು ನಮ್ಮ ಮಗಳಿಗೆ ಬೇಕಾ? "

"ನೀವೇನೂ ಚಿಂತೆ ಮಾಡಬೇಡಿ. ಆಕೆ ಎಲ್ಲವನ್ನು ಅರ್ಥಮಾಡಿಕೊಳ್ಳುತ್ತಾಳೆ. ಆಕೆಗೆ ಸ್ವಲ್ಪ ಸಮಯ ನೀಡೋಣ. ಆಕೆಗೆ ಆ ಮನೆ ಸರಿ ಹೊಂದದಿದ್ದರೆ ಆಮೇಲೆ ಏನಾದರೂ ಪರಿಹಾರ ಹುಡುಕೋಣ. ನೀವು ನಿಶ್ಚಿಂತೆಯಾಗಿರಿ."

ವಾರಕ್ಕೊಮ್ಮೆ ತವರಿಗೆ ಬರುತ್ತಿದ್ದವಳು ನಾಲ್ಕಾರು ತಿಂಗಳುಗಳಾದರೂ ತವರಿಗೆ ಬರಲಿಲ್ಲ ದೀಪಾ. ಫೋನ್ ನಲ್ಲಿಯೇ ಮಾತನಾಡಿ ಮುಗಿಸುತ್ತಿದ್ದಳು.

ಒಂದು ದಿನ ಸಾಯಂಕಾಲ ತನ್ನ ಪತಿ ಆನಂದ್ ನ ಜೊತೆಗೆ ದೀಪಾ ತಮ್ಮ ಮನೆಗೆ ಬಂದಾಗ ಶಾಮಣ್ಣ ಹಾಗೂ ಜಾನಕಮ್ಮನವರಿಗೆ ತುಂಬಾ ಖುಷಿಯಾಯಿತು. ತಮ್ಮ ಮನೆಯ ಕಾರ್ಯಕ್ರಮವೊಂದಕ್ಕೆ ಆಮಂತ್ರಣ ನೀಡಿ ಹೋದಾಗ ಜಾನಕಮ್ಮ ಸಮಾಧಾನಗೊಂಡರು.



ಕಾರ್ಯಕ್ರಮಕ್ಕೆ ನೂರಾರು ಜನರು ಆಗಮಿಸಿದ್ದರು. ಅತ್ತೇ, ಅತ್ತೇ ಎಂದು ತನ್ನ ಅತ್ತೆಯ ಹಿಂದೆ ತಿರುಗುತ್ತಾ,ಮನೆಯ ಎಲ್ಲ ಜವಾಬ್ದಾರಿಯನ್ನು ದಕ್ಷತೆಯಿಂದ ನಿರ್ವಹಿಸುತ್ತಿರುವ ಮಗಳನ್ನು ನೋಡಿ ಹೃದಯ ತುಂಬಿ ಬಂದಿತು ಜಾನಕಿಗೆ. ಸ್ವಲ್ಪ ದೂರದಲ್ಲಿ ನಿಂತ ಶಾಮಣ್ಣ ಮಗಳ ಜೊತೆಗೆ ಆಡುತ್ತಿರುವ ಮಾತುಗಳು ಜಾನಕಿಯ ಕಿವಿಯ ಮೇಲೆ ಬಿದ್ದಿತು.

"ಹೇಗಿದ್ದಿಯಾ ಮಗಳೇ?" ಎಂದು ಕೇಳಿದ ಅಪ್ಪನ ಮಾತಿಗೆ ಮಗಳು ಉತ್ತರಿಸುತ್ತಿದ್ದಳು.

"ಅಪ್ಪಾ, ಆ ದಿನ ಹೇಳಿದ ಅಮ್ಮನ ಮಾತುಗಳು ನನ್ನ ಕಣ್ಣು ತೆರೆಸಿದವು. ಅಮ್ಮನ ಆ ನುಡಿಗಳು ನನ್ನ ಹೃದಯವನ್ನೇ ಹೊಕ್ಕು ನಾನು ಮರು ಆಲೋಚನೆ ಮಾಡುವಂತೆ ಮಾಡಿತು. ನನ್ನಲ್ಲಿಯೇ ಏನೋ ಕೊರತೆಯಿದೆ ಎಂದು ನನಗೆ ಅನಿಸಿತು. ಮನೆಯವರೆಲ್ಲರೂ ನನ್ನವರು ಎಂದುಕೊಂಡು ಎಲ್ಲರನ್ನೂ ಮನಃಪೂರ್ವಕವಾಗಿ ಪ್ರೀತಿಸಿದೆ; ಆರಾಧಿಸಿದೆ. ನಾನು ನೀಡಿದ ದುಪ್ಪಟ್ಟು ಪ್ರೀತಿ ನನಗೆ ದೊರಕಿತು. "

"ಅಪ್ಪ, ನಾನು ಈ ಮನೆಯಲ್ಲಿ ತುಂಬಾ ಸುಖವಾಗಿದ್ದೇನೆ. ಇದಕ್ಕೆಲ್ಲ ಕಾರಣ ಅಮ್ಮ ನೀಡಿದ ಕಿವಿ ಮಾತು. "

ದೂರದಲ್ಲಿ ನಿಂತು ಮಗಳ ಮಾತುಗಳನ್ನು ಕೇಳಿಸಿಕೊಂಡ ಜಾನಕಮ್ಮ ಹೆಮ್ಮೆಯಿಂದ ಬೀಗಿದಳು.

